ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 38ನೇ ಸಂಚಿಕೆ ಕೊಪ್ಪ 25-5-1986 ಭಾನುವಾರ ಬೆಲೆ 40 ಪೈಸೆ

ಇಕ್ಕಡಲ್ಲು ಹಳ್ಳ ಸೇತುವೆಗೆ ಶಿಲಾನ್ಯಾಸ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಈ ತಾಲ್ಲೂಕಿನ ಅತಿ ಹಿಂದುಳಿದ ಪ್ರದೇಶಗಳಲ್ಲೊಂದಾದ ಹರೂರು-ಗ್ರಾಮದಲ್ಲಿ ಜಿಲ್ಲಾ ಉಪಯೋಜನೆಯಿಂದ 6 ಲಕ್ಷ ರೂ. ವೆಚ್ಚದಲ್ಲಿ ಮಂಜೂರಾಗಿರುವ ಇಕ್ಕಡಲ್ಲು ಹಳ್ಳ ಸೇತುವೆಗೆ ಮೇ 19ರಂದು ಸಚಿವ ಗೋವಿಂದಗೌಡರು ಶಿಲಾನ್ಯಾಸ ಮಾಡಿ, ಒಂದು ವರ್ಷದೊಳಗೆ ಕೆಲಸ ಮುಗಿಸಬೇಕೆಂದು ಗುತ್ತಿಗೆದಾರರಿಗೆ ಸೂಚಿಸಿದರು.

ಈ ಭಾಗದ ಜನ ಮಳೆಗಾಲದಲ್ಲಿ ಪಕ್ಕದ ಊರಿನ ಸಂಪರ್ಕವನ್ನು ಕಡಿದುಕೊಂಡು ತಲೆಹೊರೆಯಲ್ಲಿ ಹೊತ್ತು ಜೀವನ ಸಾಗಿಸಬೇಕಾಗಿದ್ದು, ಈ ಸೇತುವೆ ಬಹಳ ಅತ್ಯಗತ್ಯವಾಗಿತ್ತು ಎಂದರು.

ವಿ ಷಾ ದ

ಸಮೀಪದ ಜಕ್ಕಾರುಕೊಡಿಗೆ ಸೇತುವೆಯನ್ನು ಕಂಟ್ರಾಕ್ಟರು ಅರ್ಧಂಬರ್ಧ ಮಾಡಿ ಕಳೆದ ಮಳೆಗಾಲದಲ್ಲಿ 2 ಮಕ್ಕಳು ಹಳ್ಳಕ್ಕೆ ಬಿದ್ದು ಕೈ ಮುರಿದುಕೊಂಡ ಬಗ್ಗೆ ವಿಷಾದ ವ್ಯಕ್ತಪಡಿಸಿದ ಸಚಿವರು, ಆ ಗುತ್ತಿಗೆದಾರರಿಗೆ ಸರ್ಕಾರದಿಂದ, ಇಲಾಖೆಯಿಂದ ಏನೂ ತೊಂದರೆಯಿಲ್ಲದೆ ಬೇಜವಾಬ್ದಾರಿ ಕೆಲಸ ಮಾಡಿ ಹೀಗಾದುದಕ್ಕೆ ಅವರನ್ನು ದೇವರೇ ನೋಡಲಿ ಎಂದರು.

ಮುಖ್ಯ ಅತಿಥಿಯಾಗಿದ್ದ ಕಚ್ಚೋಡಿ ಶ್ರೀನಿವಾಸ್ ಮಾತನಾಡಿ, ಈ ತಾಲ್ಲೂಕಿನ ಹಗಡೂರು ಹಳ್ಳಕ್ಕೆ 25 ಸಾವಿರ, ಹೊಳೆ ಕೊಪ್ಪ-ಶಾನುವಳ್ಳಿ ರಸ್ತೆಗೆ 25 ಸಾವಿರ, ತೆಕ್ಕೂರು-ಕುಂಚೆಬೈಲು ರಸ್ತೆಗೆ 1 ಲಕ್ಷ, ಶೃಂಗೇರಿ ಆಸ್ಪತ್ರೆ ಕಟ್ಟಡ ರಿಪೇರಿಗೆ 25 ಸಾವಿರ, ವಿಠ್ಠಲಪುರ ಹರಿಜನ ಕಾಲೊನಿ ರಸ್ತೆಗೆ 1 ಲಕ್ಷ-ಹೀಗೆ ಹಲವು ಅಗತ್ಯ ಕೆಲಸಗಳನ್ನು ಮಂಜೂರು ಮಾಡಿದ ಜಿಲ್ಲಾಧಿಕಾರಿಗಳನ್ನು ಅಭಿನಂದಿಸಿ, ನೆಮ್ಮಾರು-ಹರೂರು ರಸ್ತೆಗೆ ಜಲ್ಲಿ, ತೆಕ್ಕೂರು-ಮಲೆನಾಡು ರಸ್ತೆಗೆ ದುರಸ್ತಿ ಮತ್ತು ಹಂಚಿನಕೊಡಿಗೆ-ಮಾವಿನಕಾಡು-ಬಕ್ಕಡಿಬೈಲು ರಸ್ತೆಯನ್ನು ಮಾಡಿಸಿಕೊಡುವಂತೆ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿಗಳು, ಮುಂದಿನ ವರ್ಷ ಇದೇ ಹೊತ್ತಿಗೆ ಈ ಸೇತುವೆಯ ಆರಂಭೋತ್ಸವ ಇಟ್ಟುಕೊಳ್ಳುವಂತಾಗಲೆಂದರು.

ಸ॥ ಕಾ॥ ಇಂಜಿನಿಯರ್ ಚಿನ್ನಪ್ಪ ಹೆಗ್ಡೆ ಸ್ವಾಗತಿಸಿ, ಸ॥ ಇಂ॥ ಸೋಮಶೇಖರ್ ವಂದಿಸಿದರು

ಯಾತ್ರಿಕರ ಬಸ್ ಅಪಘಾತ—ಒಂದು ಸಾವು;

35ಕ್ಕೂ ಹೆಚ್ಚು ಜನರಿಗೆ ತೀವ್ರ ಪೆಟ್ಟು

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ತಮಿಳು ನಾಡಿನ ಸೇಲಂನಿಂದ ಬಂದಿದ್ದ ಯಾತ್ರಿಕರ ಬಸ್ಸೊಂದು ಮೇ 21ರಂದು ಇಲ್ಲಿಂದ ಬೇಲೂರಿಗೆ ಹೊರಟಿದ್ದಾಗ ಅಗಳಗಂಡಿ-ಜಯಪುರ ಮಧ್ಯೆ ಕಣಿವೆಗೆ ಬಿದ್ದು ಅಪಘಾತಕ್ಕೀಡಾಗಿ ಒಬ್ಬ ವ್ಯಕ್ತಿ ಶೃಂಗೇರಿ ಆಸ್ಪತ್ರೆಗೆಂದು ಸಾಗಿಸುವಾಗ ದಾರಿಯಲ್ಲಿ ಮೃತಪಟ್ಟರು.

5 ಜನರಿಗೆ ತೀವ್ರ ಪೆಟ್ಟಾಗಿದ್ದು, ಅವರನ್ನೊಳಗೊಂಡಂತೆ 30 ಜನರನ್ನು ಶೃಂಗೇರಿ ಧನ್ವಂತರಿ ಆಸ್ಪತ್ರೆಗೆ ಸೇರಿಸಲಾಗಿದೆ. ಮಿಕ್ಕವರು ಜಯಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತುಂಬಾ ಪೆಟ್ಟಾದ ಒಬ್ಬರನ್ನು ತೀರ್ಥಹಳ್ಳಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಬೆಳಿಗ್ಗೆ 6 ಗಂಟೆಗೆ ಹೊರಟಿದ್ದ ಬಸ್ಸು ಬಹಳ ವೇಗವಾಗಿ ಚಲಿಸುತ್ತಿದ್ದಾಗ ತಿರುವೊಂದರಲ್ಲಿ ಸೀಟಿನ ಮೇಲ್ಗಡೆ ಇಟ್ಟಿದ್ದ ಸಾಮಾನು ಬಿದ್ದು, ಕೆಲವರು ಡ್ರೈವರನ ಗಮನವನ್ನು ಅತ್ತ ಸೆಳೆದು ಬಸ್ ನಿಲ್ಲಿಸಲು ಹೇಳಿದಾಗ ಬಸ್ಸು ಕಣಿವೆಗೆ ಬಿತ್ತೆನ್ನಲಾಗಿದೆ.

ಮೃತ ವ್ಯಕ್ತಿ 38 ವಯಸ್ಸಿನ ರಂಗರಾಜ ಎಂಬುವರು ತಂಪು ಪಾನೀಯದ ಫ್ಯಾಕ್ಟರಿಯೊಂದರ ಮಾಲೀಕರಾಗಿದ್ದು, ಪತ್ನಿ ಮತ್ತು ಪುಟ್ಟ ಹೆಣ್ಣು ಮಗುವೊಂದನ್ನು ಅಗಲಿದ್ದಾರೆ.

ಇದೇ ಸಂದರ್ಭದಲ್ಲಿ ಶೃಂಗೇರಿ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯರುಗಳು ರಜೆ ಹೋಗಿದ್ದು, ಸ್ಥಳೀಯ ವೈದ್ಯರಾದ ಡಾ॥ ರಾಮಚಂದ್ರರಾವ್ ಜಯಪುರದಲ್ಲೂ ಇಲ್ಲೂ ಚಿಕಿತ್ಸೆ ನಡೆಸಿದರೆಂದು ತಿಳಿದು ಬಂದಿದೆ.

ಅಪಘಾತದ ತನಿಖೆಯನ್ನು ಇನ್ ಚಾರ್ಜ್ ಸರ್ಕಲ್ ಇನ್‌ಸ್ಪೆಕ್ಟರ್ ಬಿ. ಜೆ. ಭಂಡಾರಿ ನಡೆಸುತ್ತಿದ್ದು ನೂತನ ಪೋಲೀಸ್ ಮುಖ್ಯಾಧಿಕಾರಿಗಳು ಮೇ 22ರಂದು ಸ್ಥಳಕ್ಕೆ ಭೇಟಿ ಕೊಟ್ಟಿದ್ದರು.

ತಾ॥. ಅ. ಮಂಡಳಿಗಳ ಬಜೆಟ್ ಅನುಮೋದನೆ

ಚಿಕ್ಕಮಗಳೂರು: 1986-87ನೇ ಸಾಲಿಗೆ ಜಿಲ್ಲೆಯ ಏಳೂ ತಾ.. ಅ. ಮಂಡಳಿಗಳ ಒಟ್ಟು 99.23 ಲಕ್ಷ ರೂ.ಗಳ ಆಯವ್ಯಯಕ್ಕೆ ಈಚೆಗೆ ಇಲ್ಲಿ ಜಿಲ್ಲಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಭಿವೃದ್ಧಿ ಸಮಿತಿ ಸಭೆ ಒಪ್ಪಿಗೆ ನೀಡಿದೆ.

ಇದರಲ್ಲಿ ಕೊಪ್ಪ ತಾ॥ 11.42 ಲಕ್ಷ ರೂ ಶೃಂಗೇರಿ 5.39 ಲಕ್ಷ ರೂ. ಮತ್ತು ನ. ರಾ. ಪುರ 8.38 ಲಕ್ಷ ರೂ. ಗಳ ಆಯವ್ಯಯ ಹೊಂದಿವೆ.

ಅಡಿಕೆ ಧಾರಣೆ

ಶಿವಮೊಗ್ಗ, ತಾ॥ 13.5.1986

ಸರಕು: 2710 – 3040

ಬೆಟ್ಟೆ 1610 – 1950

ಗೊರಬಲು: 1000 – 1316

ಕಾಳುಮೆಣಸು 4160

ಸೈಕಲ್ ಮೇಲೆ ಗೋವಾ, ಕರ್ನಾಟಕ ಸಾಹಸ ಯಾತ್ರೆ

ಕೊಪ್ಪ: ಇಲ್ಲಿನ ಮೂವರು ಯುವಕರು ಸೈಕಲ್ ಮೇಲೆ ಅಖಿಲ ಕರ್ನಾಟಕ ಮತ್ತು ಗೋವ ಪ್ರವಾಸಕ್ಕೆ ಹೊರಟಿದ್ದಾರೆ.

ಅರಣ್ಯ ಇಲಾಖೆ ಮತ್ತು ಲಯನ್ಸ್ ಕ್ಲಬ್ ನೆರವಿನೊಂದಿಗೆ ನಡೆಯುವ ಈ ಪ್ರವಾಸದಲ್ಲಿ ಇಂದಿನ ಅಣುಯುಗದ ಸಂದರ್ಭದಲ್ಲಿ ವಿಶ್ವ ಶಾಂತಿಯ ಅಗತ್ಯದ ಬಗ್ಗೆ ಹಾಗೂ ಪರಿಸರ ಸಂರಕ್ಷಣೆ – ಕಾಡಿನ ಅವಶ್ಯಕತೆ, ಪರಿಸರ ನೈರ್ಮಲ್ಯ ಮುಂತಾದವುಗಳ ಬಗ್ಗೆ ಜನ ಜಾಗೃತಿ ಮೂಡಿಸಲು ಯತ್ನಿಸುವುದು ಈ ಯುವಕರ ಉದ್ದೇಶಗಳಲ್ಲೊಂದಾಗಿದೆ.

ಮೇ 30ರಿಂದ ಸುಮಾರು 25 ದಿನಗಳ ಈ ಪ್ರವಾಸಕ್ಕೆ ಪ್ರವೀಣ್ ಹೆಚ್. ನಾಯಕ್, ಸಿ. ಟಿ. ಮಹೇಶ್ ಮತ್ತು ಎಡ್ವಿನ್ ಡಾಂತಿಸ್ ಆಯ್ಕೆಯಾಗಿದ್ದಾರೆ.

ಈ ಸಾಹಸಿಗಳಿಗೆ 'ಮುಂಜಾವು' ಶುಭ ಹಾರೈಸುತ್ತದೆ.

ವಿ ಷಾ ದ

ನಮ್ಮ 18.5.86ರ ಸಂಚಿಕೆಯಲ್ಲಿ ಮೆ 11ರಂದು ಸಂತೆಯಲ್ಲಿ ನಡೆದ ಗಲಾಟೆಯ ಬಗೆಗಿನ ವರದಿಯಲ್ಲಿ ಒಟ್ಟು 5 ಜನರ ಹೆಸರಿದೆಯಷ್ಟೆ. ಆ ಪೈಕಿ ರಘು ಎಂಬವರ ಮೇಲೆ ದೂರು ದಾಖಲಾಗಿಲ್ಲ. ಅದು ರಘು ಯಾನೆ ರಾಘವೇಂದ್ರ ಎಂದು ಇರಬೇಕಾಗಿತ್ತು. ಉದ್ದೇಶಪೂರ್ವಕವಲ್ಲದ ಈ ತಪ್ಪಿನಿಂದ ಗೆಳೆಯ ರಘು ಅವರಿಗಾದ ನೋವಿಗಾಗಿ ವಿಷಾದಿಸುತ್ತೇವೆ. —**ಸಂಪಾದಕ.**

" ಮನೆಗೊಂದು ಶೌಚಾಲಯ " — ಉತ್ತಮೇಶ್ವರ ವೈದ್ಯಾಧಿಕಾರಿಗಳ ಮಹತ್ವಾಕಾಂಕ್ಷೆಯ ಕನಸು

ಉತ್ತಮೇಶ್ವರ: ಹಳ್ಳಿಗಳಲ್ಲಿ ಮತ್ತು ಪಟ್ಟಣಗಳ ಬಡವರ ಕೇರಿಗಳಲ್ಲಿ ಸರಿಯಾದ ಶೌಚಾಲಯಗಳಿಲ್ಲದೆ, ಮಲ ವಿಸರ್ಜನೆಯನ್ನು ರಸ್ತೆ-ಬಯಲುಗಳಲ್ಲಿಯೇ ಮಾಡುವುದರಿಂದ ಕೊಕ್ಕೆ ಹುಳ, ಆಮಶಂಕೆ, ಅತಿಸಾರ, ಅನಿಮಿಬಿಯಾಸೀಸ್ ಮುಂತಾದ ರೋಗಗಳು ಹರಡಲು ಕಾರಣವಾಗುತ್ತದೆ. ಇಂಥ ಇಂಥ ಕಡೆ ಈ ರೋಗಗಳು ಬಹಳ ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಶೌಚಾಲಯಗಳು ಮತ್ತು ಚಪ್ಪಲಿ ಹಾಕಿ ಓಡಾಡುವುದು-ಈ ಎರಡರಿಂದಲೇ ಕೊಕ್ಕೆಹುಳವನ್ನು ಸಂಪೂರ್ಣವಾಗಿ ತಡೆಗಟ್ಟಬಹುದೆನ್ನುತ್ತಾರೆ ವೈದ್ಯರು.

ಆದರೆ ಸಾಮಾನ್ಯ ಜನರಿಗೆ ಮನೆಮನೆಗೆ ಶೌಚಾಲಯ ಕಟ್ಟಿಕೊಳ್ಳುವುದು ಅಸಾಧ್ಯವಾಗಿರುತ್ತದೆ. ಆದ್ದರಿಂದ ಕಡೇ ಪಕ್ಷ ಬಡವರ ಮನೆಗಳಲ್ಲಾದರೂ ಒಂದೊಂದು ಶೌಚಾಲಯ ಕಟ್ಟಿಸುವುದು ಸಾಧ್ಯವಾದರೆ....?

ಇದೊಂದು ಕನಸು. ಆದರೆ ನನಸಾಗಲಾರದ್ದೇನಲ್ಲ. ಇಲ್ಲಿನ ಸರ್ಕಾರಿ ವೈದ್ಯಾಧಿಕಾರಿ ಡಾ॥ ಕೋದಂಡರಾಂ ಕಂಡ ಈ ಕನಸಿಗೆ ಕಲ್ಪನೆಯ ರೂಪ. ಹೊನ್ನಾವರದ 'ಸ್ನೇಹ ಕುಂಜ'ದ ಡಾ॥ ಕುಸುಮಾ ಸೊರಬ್‌ರಿಂದ ಈ ಕಲ್ಪನೆಗೆ ಕುಮ್ಮಕ್ಕು. ಕನಸಿಗೆ ಇದಕ್ಕೆ ರೆಕ್ಕೆ-ಪುಕ್ಕ ಮೂಡಿಸುವ ಯತ್ನ.

ಇದಕ್ಕಾಗಿ ಡಾ॥ ಕೋದಂಡರಾಂ ಇಲ್ಲಿನ ಸುತ್ತಮುತ್ತಲ ಪ್ರದೇಶಗಳ ಸಮೀಕ್ಷೆಯನ್ನು ಆರೋಗ್ಯ ಸಿಬ್ಬಂದಿಯಿಂದ ನಡೆಯಿಸಿದ್ದಾರೆ. ಶೇ. 99 ಮನೆಗಳಲ್ಲಿ ಶೌಚಾಲಯಗಳಿಲ್ಲದ್ದು ಗೊತ್ತಾಗಿದೆ. ಅದರ ಪೈಕಿ ಅತಿ ದುರ್ಬಲ ವರ್ಗದವರ 30 ಮನೆಗಳನ್ನು ಹತ್ತಿರದ ಎರಡು ವಸತಿ ಪ್ರದೇಶಗಳಿಂದ ಆಯ್ದು ಅಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೊಳಿಸುವ ಬಗ್ಗೆ ಯೋಚಿಸಿದ್ದಾರೆ. ಕೇರಳದ ಕಡೆ ಚಾಲ್ತಿಯಲ್ಲಿರುವಂಥ 'ಹೊಂಡ ಮತ್ತು ಚಪ್ಪಡಿ' ವ್ಯವಸ್ಥೆ, ಮೇಲೊಂದು ಸಣ್ಣ ಕೊಟ್ಟಿಗೆ-ಇಷ್ಟಿರುವ ಶೌಚಾಲಯ ಕಟ್ಟಲು ಸುಮಾರು 250 ರೂ. ಖರ್ಚಾಗಬಹುದು. ಒಟ್ಟು ಸದ್ಯಕ್ಕೆ ಏಳೆಂಟು ಸಾವಿರ ರೂಪಾಯಿ.

ಊರಿನ ಸಾರ್ವಜನಿಕರು, ಲಯನ್ಸ್, ರೋಟರಿಯಂಥ 'ಸೇವಾ ಸಂಸ್ಥೆ'ಗಳವರು ಮನಸ್ಸು ಮಾಡಿದರೆ ಇದೇನೂ ಅಸಾಧ್ಯವಲ್ಲ.

ಇದಕ್ಕಾಗಿ ಮೇ 22ರಂದು ಒಂದು ಸಭೆ ಕರೆದು ಮೇಲ್ಕಂಡ ಸಂಸ್ಥೆಗಳವರನ್ನೆಲ್ಲ ಆಹ್ವಾನಿಸಿದ್ದರು. ಆದರೆ ಅವರು ಯಾರೂ ಬಾರದ್ದರಿಂದ ಸಭೆಯನ್ನು ಮುಂದೂಡಬೇಕಾಯಿತು.

ಸಾರ್ವಜನಿಕರು ಮತ್ತು ಸ್ವಂಘ ಸಂಸ್ಥೆಗಳವರು ಈಗಲಾದರೂ ಈ ಕಡೆ ಗಮನಹರಿಸಿ ಇಂಥದೊಂದು ಪ್ರಾಯೋಗಿಕ ಯೋಜನೆಯಲ್ಲಿ ಸಹಕರಿಸಿದರೆ ಮುಂದೆ ಇದು ಹಳ್ಳಿಗಾಡಿನ ಆರೋಗ್ಯ ರಕ್ಷಣೆಯಲ್ಲಿ ಒಂದು ಮಹತ್ತರ ಮಾರ್ಪಾಡಿಗೆ ದಾರಿಯಾಗಬಹುದು.

ಕಿಗ್ಗ ದೇವಸ್ಥಾನದ ಸಹಪಂಕ್ತಿ ಭೋಜನ ಕುರಿತ ಸಂವಾದ : ಓದುಗರ ಅಭಿಪ್ರಾಯಗಳ ವಿಶ್ಲೇಷಣಾತ್ಮಕ ಸಿಂಹಾವಲೋಕನ

ಶಂಗೇರಿ ತಾ|| ಕಿಗ್ಗದ ಮುಜರಾಯಿ ದೇವಸ್ಥಾನದಲ್ಲಿ ರಥೋತ್ಸವ, ರುದ್ರಹೋಮಗಳಂಥ ಸಾಮೂಹಿಕ ಉತ್ಸವಗಳಂದು ಸಹಪಂಕ್ತಿ ಭೋಜನ ನಡೆಸಬೇಕೆಂಬ ಒತ್ತಾಯ, ಇದಕ್ಕಾಗಿ ಕಳೆದ ಅಕ್ಟೋಬರ್‌ನಲ್ಲಿ ನಡೆದ ರುದ್ರಹೋಮದ ದಿನ ಕೆಲವು ಯುವಕರಿಂದ ಊಟದ ಪಂಕ್ತಿಗೆ ಪ್ರವೇಶ— ಇವುಗಳ ಹಿನ್ನೆಲೆಯಲ್ಲಿ ನಮ್ಮ ಪತ್ರಿಕೆಯ 30.3.86ರ ಸಂಚಿಕೆಯ 'ವೇದಿಕೆ'ಯಲ್ಲಿ ಆರಂಭಿಸಿದ್ದ ಸಂವಾದಕ್ಕೆ ಉತ್ತರವಾಗಿ 26 ಪತ್ರಗಳು ಪ್ರಕಟವಾದುವಷ್ಟೆ. ಅವುಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಒಂದು ವಿಶ್ಲೇಷಣಾತ್ಮಕ ಸಿಂಹಾವಲೋಕನ ಇಲ್ಲಿದೆ.

ಕಿಗ್ಗದಲ್ಲಿ ರಥೋತ್ಸವ, ರುದ್ರಹೋಮಗಳಂಥ ಸಾಮೂಹಿಕ ಸಮಾರಂಭಗಳಲ್ಲಿ ನಡೆಯುವ ಸಂತರ್ಪಣೆಗಳಲ್ಲಿ ಸಹಪಂಕ್ತಿ ಭೋಜನ ಇರಬೇಕೆಂಬ, ಮುಖ್ಯವಾಗಿ ಬ್ರಾಹ್ಮಣೇತರ ವರ್ಗಗಳವರ ಹಲವು ವರ್ಷಗಳ ಒತ್ತಾಯವನ್ನೂ, ಅದು ವರ್ಷದಿಂದ ವರ್ಷಕ್ಕೆ ಪಡೆಯುತ್ತಿದ್ದ ತೀವ್ರತೆಯನ್ನೂ ಗಮನಿಸಿ, ಈ ಕುರಿತು ಸಾರ್ವಜನಿಕ ಚಿಂತನೆ–ಚರ್ಚೆಗಾಗಿ ನಮ್ಮ ಪತ್ರಿಕೆ 'ವೇದಿಕೆ'ಯಲ್ಲಿ ಅವಕಾಶ ಕಲ್ಪಿಸಿ, ಓದುಗರಿಂದ ಬಂದ 26 ಪತ್ರಗಳನ್ನು ಪ್ರಕಟಿಸಿತಷ್ಟೆ. ಈ ಸಮಸ್ಯೆಯ ಬಹುತೇಕ ಎಲ್ಲ ಮುಖಗಳನ್ನೂ ಕುರಿತು ಇಲ್ಲಿ ಅಭಿಪ್ರಾಯಗಳು ವ್ಯಕ್ತವಾಗಿವೆಯೆನ್ನಬಹುದು. ತೀರಾ ಹೇಳಿದ್ದನ್ನೇ ಹೇಳುವಂಥ ಅಥವಾ ವಿಚಾರವನ್ನು ಅನಗತ್ಯ ದಿಕ್ಕಿಗೆ ತಿರುಗಿಸಿ ಲಂಬಿಸುತ್ತವೆನ್ನಿಸಿದ ಇನ್ನೂ ನಾಲ್ಕೈದು ಪತ್ರಗಳನ್ನು ಮಾತ್ರ ಪ್ರಕಟಿಸಲಿಲ್ಲ.

ಈ ಹಿಂದೆಯೇ ಬರೆದಿದ್ದಂತೆ, ಕಿಗ್ಗ ದೇವಸ್ಥಾನದ ಭಕ್ತ ಸಮೂಹದೊಳಗೇ ಅಂದರೆ ಸಮಾಜದ ಗರ್ಭದೊಳಗೇ ಹುಟ್ಟಿ ಬಲಿಯುತ್ತಿದ್ದಂಥ ಈ ಸಮಸ್ಯೆಯನ್ನು ಶಸ್ತ್ರಚಿಕಿತ್ಸೆಯ ಅಗತ್ಯ ಒದಗುವ ಮೊದಲೇ ಶಮನಗೊಳಿಸಿ ನಿವಾರಿಸುವ ಉದ್ದೇಶದಿಂದ ಒಂದು ಮುಕ್ತ ಚರ್ಚೆ ನಡೆಯಿಸಲು ಈ ಅವಕಾಶ ಕಲ್ಪಿಸಲಾಗಿತ್ತು. ಹಾಗೂ ಈ ಯತ್ನದಿಂದಾಗಿ ನಮ್ಮ ಸಮಾಜದ ಚಿಂತನೆ ಒಂದೆರಡು ಹೆಜ್ಜೆಯಾದರೂ ಮುಂದೆ ಹೋಗಲು ಸಾಧ್ಯವಾದರೆ, ಅದರಿಂದ ಸಮಾಜದ, ದೇಶದ ಐಕ್ಯತೆಯತ್ತ ಒಂದು ಸಣ್ಣ ಹೆಜ್ಜೆಯಿಟ್ಟಂತಾಗುತ್ತದೆ ಎಂಬ ಆಶಯವೂ ಇತ್ತು.

ಈ ಆಶಯ ಈಡೇರಿತೇ ಇಲ್ಲವೇ ಎಂಬುದು, ಇಷ್ಟು ಸುದೀರ್ಘವಾದ, ಸರ್ವತೋಮುಖವಾದ ಚರ್ಚೆಯ ಫಲಿತಾಂಶವನ್ನು ನೋಡಿದ ನಂತರವೇ ತಿಳಿಯಬೇಕಾಗಿದೆ.

ಸುಮಾರು 2 ತಿಂಗಳ ಕಾಲ ಪತ್ರಿಕೆಯಲ್ಲಿ ನಡೆದ ಈ ಸುದೀರ್ಘ ಚರ್ಚೆಯ ಮುಖ್ಯಾಂಶಗಳನ್ನು ಕ್ರೋಢೀಕರಿಸುವುದು ಈ ಬರಹದ ಮುಖ್ಯ ಉದ್ದೇಶ.

ಚರ್ಚೆಯಲ್ಲಿ ಭಾಗವಹಿಸಿದ ಇಪ್ಪತ್ತೊಂದು ಜನರ ಪೈಕಿ 2–3 ಜನರನ್ನು ಬಿಟ್ಟರೆ ಮತ್ತೆ ಯಾರೂ ಸಹಪಂಕ್ತಿ ಭೋಜನ ಬೇಡವೆಂದು ಹೇಳಿಲ್ಲ ಎಂಬುದು ಒಂದು ಗಮನಾರ್ಹ ಸಂಗತಿ. ಹೀಗೆ ಬೇಡವೆಂದವರಾದರೂ ಪಂಕ್ತಿಯಿಂದ ಹೊರಗಿಡಲ್ಪಟ್ಟು ಅವಮಾನ ನುಂಗಿಕೊಂಡಿರುವ ಜಾತಿಗಳವರೇ ಆಗಿದ್ದಾರೆ. ಅಂದರೆ ಉಳಿದ ವಿಚಾರಗಳಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಸಮಾಜದ ಸಾಮರಸ್ಯಕ್ಕೆ ಸಹಪಂಕ್ತಿ ಭೋಜನ ಬೇಕು ಎಂಬ ವಿಚಾರದಲ್ಲಿ ಬಹಳವಾದ ಒಮ್ಮತವಿದೆ ಎನ್ನಿಸುತ್ತದೆ.

ಹೀಗೆನ್ನುವಾಗ, "ಕೇವಲ ಸಹಪಂಕ್ತಿ ಭೋಜನ ಏರ್ಪಡಿಸುವುದರಿಂದಲೇ ಸಾಮರಸ್ಯ ಮೂಡಿಬಿಡುತ್ತದೆಯೇ? ಜಾತಿಭೇದ ತೊಲಗಿ ಬಿಡುತ್ತದೆಯೆ?" ಎಂದು ಪ್ರಶ್ನಿಸಿದ ಬುದ್ಧಿವಂತರೂ ಇದ್ದಾರೆ. (ಚಿಂತನೆಯನ್ನು ದಾರಿ ತಪ್ಪಿಸಲು, ಬೇಕೆಂದೇ ಹೀಗೆ ಪ್ರಶ್ನಿಸುವುದು ಎಂಬುದು ಖಚಿತ. ಆದ್ದರಿಂದಲೇ 'ಬುದ್ಧಿವಂತರು' ಎನ್ನಬೇಕಾಗಿದೆ.)

ಬರೀ ಸಹಪಂಕ್ತಿ ಭೋಜನದಿಂದ ಜಾತಿ ತೊಲಗುವುದಿಲ್ಲವೆಂದು ಅಂಥವರಿಗೆ **ಧೈರ್ಯ ಹೇಳಬಹುದಾದರೂ,** ನೂರಾರು ಸಾವಿರಾರು ಜನ ಸೇರುವ ಕಡೆ, ಕೊನೇ ಪಕ್ಷ ದೇವರ ಪ್ರಸಾದವೆಂಬ ಭಾವನೆಯಿಂದಲಾದರೂ ಒಟ್ಟಿಗೆ ಕುಳಿತು ಉಣ್ಣಲು ಸಾಧ್ಯವಾದರೆ ಜಾತಿ ಭೇದ ಮರೆಯಲು ಸ್ವಲ್ಪವಾದರೂ ಸಹಕಾರಿಯಾದೀತೆಂದು ಒಂದು ಆಶಯವಿದೆ. ಅದಕ್ಕಿಂತ ಮುಖ್ಯವಾಗಿ, "ಹಾಗಾದರೆ ಸಹಪಂಕ್ತಿಯಿಂದಲೇ ಜಾತಿ ಭೇದ ಹೋಗುವುದಿಲ್ಲವಾದ್ದರಿಂದ ಸಾರ್ವಜನಿಕ ದೇವಾಲಯವಾದ ಇಲ್ಲಿ ಇನ್ನೂ ಪಂಕ್ತಿ ಭೇದವನ್ನೇ ಮುಂದುವರಿಸಿಕೊಂಡು ಹೋಗೋಣವೆ?" ಎಂಬ ಪ್ರಶ್ನೆಗೆ ಉತ್ತರ ಬೇಕಾಗುತ್ತದೆ.

ಬಹಳ ಜನರು ವ್ಯಕ್ತಪಡಿಸಿರುವ ಎರಡನೇ ಅಭಿಪ್ರಾಯವೆಂದರೆ, ಸಹಪಂಕ್ತಿ ಭೋಜನವೆಂದರೆ ಬ್ರಾಹ್ಮಣರು ಮತ್ತು ಒಕ್ಕಲಿಗರಿಗೆ ಮಾತ್ರವಲ್ಲ, ದೇವಸ್ಥಾನಕ್ಕೆ ಬರುವ ಹರಿಜನರಾದಿಯಾಗಿ ಎಲ್ಲಾ ಜಾತಿ–ಜನಾಂಗಗಳವರಿಗೂ ಒಂದೇ ಪಂಕ್ತಿಯಿರಬೇಕು ಎಂಬುದು. ಅಂದಿನ ಹೋಮ ಮುಂತಾದ ಕಾರ್ಯದಲ್ಲಿ ಭಾಗವಹಿಸುವ ಋತ್ವಿಜರು ಉಪವಾಸದಲ್ಲಿರುತ್ತಾರೆ, ಅವರಿಗೆ ಬೇಗ ಊಟವಾಗಬೇಕು ಎಂಬ ಕಾರಣಕ್ಕೆ ಅವರಷ್ಟು ಜನರಿಗೆ ಮಾತ್ರ ಬೇರೆ ಪಂಕ್ತಿ ಇರಲಿ; ಅವರುಗಳು ಒಪ್ಪುವುದಾದಲ್ಲಿ ಅದೂ ಬೇಡ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಸಹಪಂಕ್ತಿಯ ಆಶಯ ಇಲ್ಲಿಗೇ ಕೊನೆಗೊಳ್ಳದೆ, ತಮ್ಮ ತಮ್ಮ ಮನೆಗಳಲ್ಲೂ ಮುಂದುವರಿಯಲಿ ಹಾಗೂ ಎಲ್ಲಾ ಸಾರ್ವಜನಿಕ ರಂಗಗಳಲ್ಲೂ ಸಾಮರಸ್ಯದ ಚಟುವಟಿಕೆ ಹೆಚ್ಚಲಿ ಎಂಬ ಮಹತ್ವಾಕಾಂಕ್ಷೆಯ ಅಭಿಪ್ರಾಯವೂ ವ್ಯಕ್ತವಾಗಿದೆ.

ಮೂರನೆಯದಾಗಿ, ಸಹಪಂಕ್ತಿ ಸಾಮರಸ್ಯಕ್ಕೆ ದಾರಿ ಮಾಡಿಕೊಡುವ ಆಶಯವಿದ್ದರೂ ಮನಸ್ಸಿನಾಳದಲ್ಲಿ ಜಾತಿ ಭೇದದ, ಜಾತಿ ದ್ವೇಷದ ಭಾವನೆಗಳನ್ನು ಪೋಷಿಸಿಕೊಂಡೇ ಹೋಗುವುದರ ವಿರುದ್ಧ ಹಲವರು ಎಚ್ಚರಿಸಿದ್ದಾರೆ. ಹಾಗೆಯೇ; ದುಡುಕುವುದು, ಯಾವುದೇ ವಿಚಾರದಲ್ಲಿ ಸಮನ್ವಯ ಯತ್ನಕ್ಕಿಂತ ಹೆಚ್ಚಾಗಿ ಬಲವಂತಕ್ಕೆ ತಿರುಗುವುದು— ಇಂಥವುಗಳ ಬಗ್ಗೆಯೂ ಹಲವರು ಗಮನ ಸೆಳೆದಿದ್ದಾರೆ. ಇವು ವಾಸ್ತವಿಕ ಮತ್ತು ಸಕಾಲಿಕ ಎಂಬುದರಲ್ಲಿ ಅನುಮಾನವಿಲ್ಲ.

ನಾಲ್ಕನೆಯದಾಗಿ, ಸಾಮೂಹಿಕ ಉತ್ಸವದಲ್ಲಿ ಪಂಕ್ತಿಭೇದ ಶಿಕ್ಷಾರ್ಹ ಅಪರಾಧ; ಇದು ಪ್ರತಿಷ್ಠೆಯ ಪ್ರಶ್ನೆಯಾಗದಿರಲಿ; ಎಂಬ ವಿಚಾರಗಳ ಜೊತೆಗೆ, "ಸಂಪ್ರದಾಯ" ಎನ್ನುವವರನ್ನು ಕುರಿತು "ಯಾವುದು ಸಂಪ್ರದಾಯ — ಭೋಜನವೆ, ಪೂಜೆ ಹೋಮಗಳೆ?"; "ಹೋಮಕ್ಕೆ ಮಡಿ, ಊಟಕ್ಕೂ ಮಡಿಯೆ?"; "'ಕೀಳು' ಜಾತಿಯ ದೊಡ್ಡ ಅಧಿಕಾರಿ 'ಮೈಲಿಗೆ'ಯಲ್ಲವೆ?" ಮುಂತಾದ ಪತ್ರಗಳಲ್ಲಿ ಸಂಪ್ರದಾಯದ ಹೆಸರಿನಲ್ಲಿ ನಡೆಸುವ ಎಡಬಿಡಂಗಿತನ, ಇಬ್ಬಂದಿತನಗಳನ್ನು ಗುರ್ತಿಸಲಾಗಿದೆ; ಸಂಪ್ರದಾಯ ಎಂದು ಕಟ್ಟುನಿಟ್ಟು, ಯಾವುದೂ ಇಲ್ಲ, ಅನುಕೂಲಕ್ಕೆ ತಕ್ಕಂತೆ ಎಲ್ಲವನ್ನೂ ಬದಲಿಸಿಕೊಳ್ಳಬಹುದು ಎಂಬುದಕ್ಕೆ ಉದಾಹರಣೆಗಳನ್ನು ತೋರಿಸಲಾಗಿದೆ; ಭಕ್ತಿಯ ನಿಷ್ಕಲ್ಮಷತೆಗಿಂತ ದೇಹದ 'ಮಡಿ'ಯೇ ದೊಡ್ಡದೆ? ಎಂಬುದರ ಕಡೆ ಗಮನ ಸೆಳೆಯಲಾಗಿದೆ.

ಸಹಪಂಕ್ತಿ ಭೋಜನಕ್ಕೆ ಇನ್ನೂ ಕಾಲ ಪಕ್ವವಾಗಿಲ್ಲ. ಅದು ಏನಿದ್ದರೂ ಕ್ರಮೇಣ ಆಗ ಬೇಕು ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ದೇಶವನ್ನು 21ನೇ ಶತಮಾನಕ್ಕೆ ಜಗಿಸುವ ಹೊಸ್ತಿಲಲ್ಲಿ ನಾವಿರುವಾಗಲೂ ಮನುಷ್ಯ–ಮನುಷ್ಯರು ಕೇವಲ ಒಟ್ಟಿಗೆ ಕೂತು ಉಣ್ಣುವುದಕ್ಕೆ ಸಹ ಕಾಲ ಪಕ್ವವಾಗಿಲ್ಲ ಎನ್ನುವುದಾದರೆ, ಆ 'ಕ್ರಮೇಣ' ಎನ್ನುವುದು ಯಾವಾಗ ಬರುತ್ತದೆ? ಎಂದು ಇವರು ಹೇಳಬೇಕು. ಅಂಥ ಕಾಲ ಇನ್ನೂ ಬಂದಿಲ್ಲ ಎಂಬುದು ನಿಜವಾದರೆ, ಶೃಂಗೇರಿಯ ಕುಂಭಾಭಿಷೇಕದ ವೇಳೆ ಇಂಥದೊಂದು ಕನಿಷ್ಠ ಪ್ರಮಾಣದ ಪ್ರಯತ್ನವಾದರೂ ನಡೆಯಿತಲ್ಲ. ಅದು ಹಾಗಾದರೆ ಅನಿವಾರ್ಯವಾಗಿರಲಿಲ್ಲ ಎನ್ನಬಹುದೆ?

ಸಮಾಜದಲ್ಲಿ ಚಿಂತನೆಯ ಮುಂಚೂಣಿಯಲ್ಲಿರುವವರು ಎಂದುಕೊಳ್ಳುವವರು ಸ್ವತಃ ತಮ್ಮ ವರ್ತನೆಯನ್ನು ತಾವೇ ವಿಮರ್ಶಿಸಿ, ಕಾಲ ಧರ್ಮಕ್ಕೆ ತಕ್ಕಂತೆ ಬದಲಾವಣೆ–ಸುಧಾರಣೆಗಳನ್ನು ಮಾಡಿಕೊಳ್ಳಬೇಕಿತ್ತು. ಹೋಗಲಿ ಎಂದರೆ, ಭೇದಕ್ಕೆ ಈಡು ಮಾಡಲ್ಪಟ್ಟವರು ಕೇಳ ತೊಡಗಿದಾಗಲೂ

(3ನೇ ಪುಟಕ್ಕೆ)

ಪದ್ಯದಂಕಣ

ವರ್ಷ–ಹರ್ಷ

ಹೊಸ ವರುಷದ ಹಳೆ ಸರಸದ
ಮಿಳಿತಗೊಂಡ ಗೆಜ್ಜೆನಾದ
ತುಂಬುತಿಹುದು ಕಿವಿಯಲಿ,
ಹೊಮ್ಮುತಿಹುದು ಕ್ರಿಯೆಯಲಿ

ಇರುಸು–ಮುರುಸು ಹಳಸು ಏಕೆ
ಸಪ್ತವರ್ಣದ ಬೆಡಗಿ ಬೇಕೆ
ವರ್ಷ ವರ್ಷ ಶುಭಾಶಯವಿಲ್ಲೆ
ಗುಂಡು ಗಿಟಾರಿನ ಮಧ್ಯದಲ್ಲೆ

ಅತ್ತ ಬೊಬ್ಬೆಯು ಇತ್ತ ನಿದ್ದೆಯು
ಏನು ಹರುಷವೊ ಏನು ವರುಷವೊ
ಬೊಬ್ಬೆ ಅಡಗಿಸಿ ದೃಷ್ಟಿ ಹೊರಳಿಸಿ
ಹಳತು ಸಾಕೊ ಹೊಸತು ಬೇಕೊ

ಹಲವರುಡಿಗೆ ಚಿಂದಿ ಛಿದ್ರ
ಕೆಲವರುಡುಗೆ ಸೊಳ್ಳೆ ಪರದೆ
ಇನ್ನು ಉಂಟೆ ಸಮಾನತೆ ಶಂಕೆ
ಹೊಸ ವರ್ಷದ ಹೊಸ ಕಾಣಿಕೆ.

ಸವಿದು ಮೆಲ್ಲಿರೊ ಬೇವು ಬೆಲ್ಲವ
ಸೆರಗ ಮರೆಯಲಿ ಬುರುಕಿನಡಿಯಲಿ
ಹಳತ ಮರೆಯುತ ಹೊಸತ ಬಯಸುತ
ಸನ್ನಿವೇಶದ ಶಿಶುಗಳೆ.

—ಡಿ. ಜಿ. ರಮೇಶ್

ಕರೆ

ಡೊಂಕು ದಾರಿಯನು ಬಳಸಿ
ಕವಾಟವನು ತೆರೆದು
ಬಾ ಹಕ್ಕಿ ಹೀಗೆ ಬಾ
ಈ ಖಾಲಿ ಗೂಡೊಳಗೆ–
ಗಂಧ ಹೂವೊಳಗೆ ಮರಳಿದಂತೆ.

ರೆಕ್ಕೆಗಳ ಬೀಸಿ ಬೀಸಣಿಗೆ
ಪುಕ್ಕಗಳ ಹರವಿ ಹಾರಾಡಿ
ಸಾಲಾಗಿ ಕರಿ ಬಾಯಿ ತೆರೆವ
ಮಡುಗಳನು ಸುಳಿಗಳನು ದಾಟಿ
ಹೃತ್‌ಕರಣ ಕುಕ್ಷಿಗಳ ಬೆಂಗಾಡ
ಹಸಿ ಹಸಿರು ರೆಕ್ಕೆಗಳಿಂದ
ಹರಸು ಬಾ ಬಾರೆ.

ಈ ಗೂಡು ಪಾತಾಳದಲಿ
ಕುದಿಕುದಿದು ಸ್ಫೋಟಕ್ಕೆ
ಸನ್ನದ್ಧ ಗವಿ ಬಾವಿಯೊಳಗೆ
ಹಾಡು ಹಕ್ಕಿ ಹಾಡಾಗಿ
ಹರಡು ಹರಡಲೆ ಹಕ್ಕಿ
ಸುರಿದೊನಕೆ ಸೋನೆಯಾಗಿ.

ಬಾ ಹಕ್ಕಿ ಹೀಗೆ ಬಾ
ಅಂಗಾಂಗಗಳ ತಡವಿ
ಕೊಕ್ಕಿಂದ ಮುತ್ತುಗಳನಿಕ್ಕಿ
ಆವರಿಸಿ ಹುಯಿಲಿಡುವ
ಮೌನಗಳ ನುಂಗಿ
ಬಾ ಬಾರೆಲೆ
ಎಲೆ ಹಕ್ಕಿ ಹೀಗೆ ಬಾ.

—ಗುರುರಾಜ ಶಂತ್ರಿ, ಪಣೆಯೂರು.

ಸಹಪಂಕ್ತಿ: ಓದುಗರ ಅಭಿಪ್ರಾಯಗಳ ಸಿಂಹಾವಲೋಕನ

(2ನೇ ಪುಟದಿಂದ)

ಸಹ "ಇನ್ನೂ ಕಾಲ ಬಂದಿಲ್ಲ"ವೆಂದು ಅವರನ್ನು ಹೊರಗೇ ಇಡುವುದಾದರೆ, ಇದಕ್ಕಿಂತ ಇನ್ನೆಂಥ 'ಕ್ರಮೇಣ' ಸಾಧ್ಯ? ಇಷ್ಟು ಸಣ್ಣ ಪ್ರಮಾಣದ ಒತ್ತಾಯವನ್ನೂ ಬಲವಂತದ ಪ್ರಯತ್ನ. ಇದರಿಂದ ಕ್ರಾಂತಿಯಾದೀತು. ಪರಿಣಾಮ ಶೂನ್ಯವಾದೀತು ಎಂದು ಬೊಬ್ಬಿಡುತ್ತ ಕನಿಷ್ಠ ವ್ಯಕ್ತಿ ಗೌರವವನ್ನು ನೀಡಲು ತಯಾರಾಗದಿದ್ದರೆ, ಅಂಥ 'ಕ್ರಾಂತಿ' ಅವರ ಪಾಲಿಗೆ ಏಕಾಗಬಾರದು ಹಾಗೂ ಅದನ್ನು ಹೇಗೆ ತಡೆಯಬಲ್ಲಿರಿ? ಎಂದು ಯೋಚಿಸಬೇಕು.

ಹಲವರು ಪದೇ ಪದೇ ಚಂದ್ರಗುತ್ತಿಯ ಗಲಭೆಯನ್ನು ಪ್ರಸ್ತಾಪಿಸಿ ಬೆದರಿಸಲು ಯತ್ನಿಸಿದ್ದಾರೆ. ಆದರೆ, ಬಳ್ಳಾರಿ ಜಿಲ್ಲೆಯ ಎರಡು ಹಳ್ಳಿಗಳಲ್ಲಿ 'ಓಕುಳಿ' ಎಂಬ 'ದೇವತಾ ಕಾರ್ಯ'ದ ಹೆಸರಲ್ಲಿ ನಡೆಯುತ್ತಿದ್ದ, ಇದಕ್ಕಿಂತಲೂ ಕ್ರೂರವಾದ, **ದುರ್ಬಲ ವರ್ಗದ ತರುಣಿಯರ ಸಾಮೂಹಿಕ ಬಹಿರಂಗ ಮಾನಭಂಗದ ಪದ್ಧತಿಯೊಂದನ್ನು** ಚಂದ್ರಗುತ್ತಿ ನಡೆದ ಕೆಲವೇ ದಿನಗಳಲ್ಲಿ ಬಳ್ಳಾರಿ ಪೋಲೀಸ್ ಸೂಪರಿಂಟೆಂಡೆಂಟ್ ಸುಭಾಷ್ ಭರಣಿಯವರು ದೃಢವಾದ ಕ್ರಮಗಳಿಂದ ನಿಲ್ಲಿಸಿ, ಅದರ ಬದಲು ರಥೋತ್ಸವದಂಥ ಸೇವೆಗಳಲ್ಲಿ ತೊಡಗಲು ಅಲ್ಲಿನ ಸಹಸ್ರಗಟ್ಟಲೆ ಭಕ್ತರ ಮನವೊಲಿಸಿದ್ದಾರೆ. ಇದರರ್ಥ ಏನೆಂದು ಸ್ವಲ್ಪ ಯೋಚಿಸಿ.

ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಅಗ್ರಪಂಕ್ತಿಯನ್ನು ಕೊಡುವುದು ಅವರ ವಿದ್ಯೆಗೆ, ಶುದ್ಧ ನಡವಳಿಕೆಗೆ, ಧರ್ಮ ನಿಷ್ಠೆಗೆ ಕೊಡುವ ಗೌರವದ ದ್ಯೋತಕ. ಕೀಳರಿಮೆಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಹಿಂದೆ ಬ್ರಾಹ್ಮಣರು ಮಾತ್ರ ಈ 'ಅರ್ಹತೆ'ಗಳನ್ನೆಲ್ಲ ಹೊಂದಿದ್ದಾಗ ಈ ಮಾತನ್ನು ಒಂದು ವೇಳೆ ಒಪ್ಪಬಹುದಾಗಿದ್ದರೂ, ಈಗ ಅವರಲ್ಲಿ ಈ ಅರ್ಹತೆಗಳು ಶಿಥಿಲವಾಗಿ, ಬೇರೆ ಜಾತಿಗಳವರೂ ಅಪಾರ ಸಂಖ್ಯೆಯಲ್ಲಿ ಈ ಅರ್ಹತೆಗಳನ್ನು ಸಂಪಾದಿಸಿದವರಿರುವಾಗ ಕೇವಲ ಜಾತಿಯ ಆಧಾರದಿಂದ ಈ ಮಾತಿಗೆ ಈಗಲೂ ಚಲಾವಣೆ ಕೊಡುವುದು ಸಮರ್ಪಕವೆ? ಎಂದು ಯೋಚಿಸಬೇಕು.

ಇನ್ನು, ಇಂಥ ಅವಮಾನಕರ ಭೇದವನ್ನು, ನಮ್ಮ ದೇಶಕ್ಕೇ ಅಪಖ್ಯಾತಿ ತರಬಲ್ಲ ಇಂಥ ನಿರಾಧಾರವಾದ ನಡವಳಿಕೆಯನ್ನು ಪ್ರಶ್ನಿಸಿ, ಅದರ ಬದಲಾವಣೆಗೆ ಒತ್ತಾಯಿಸುವುದನ್ನು ದುರಾಗ್ರಹ, ರಾಜಕೀಯ ದುರುದ್ದೇಶ, ಜಾತಿವಾದ ಮುಂತಾಗಿ ಹಲವರು ಹೆಸರಿಸಿದ್ದಾರೆ. ಇದರ ಬಗ್ಗೆ ಬಹುಶಃ ವಿಮರ್ಶೆಯೇ ಅನಗತ್ಯವೆನ್ನಿಸುತ್ತದೆ.

ಬೇರೆಯವರೊಟ್ಟಿಗೆ ಕೂತು ಉಣ್ಣಲು ಸಾಧ್ಯವಿಲ್ಲದವರು ಮನೆಯಲ್ಲೇ ಉಣ್ಣಲಿ ಎಂಬ ಖಾರವಾದ ಮಾತಿಗೆ ಪ್ರತಿಯಾಗಿ— ಎಲ್ಲರೂ ಸೇರುವ ಇಲ್ಲಿ ಪಂಕ್ತಿ ಭೇದ ತೊಡೆಯಬೇಕು ಎಂಬ ವಿಚಾರವಾದ್ದರಿಂದ. ಮೇಲ್ಕಂಡಂತೆ ಹೇಳಿದರೆ ಅದರಿಂದ ಸಹಪಂಕ್ತಿ ಭೋಜನದ ಆಶಯಕ್ಕೇ ಚ್ಯುತಿಯುಂಟಾಗುತ್ತದಲ್ಲ ಎಂಬ ಅಭಿಪ್ರಾಯವೂ ಬಂದಿದೆ.

"ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದವರೆಲ್ಲರೂ ಎಲ್ಲಾ ರೀತಿಯಲ್ಲಿ ಮುಕ್ತವಾಗಿ ಬೆರೆಯಲು ಸಾಧ್ಯವಿಲ್ಲ ಎಂಬುದೇ ಅವರೆಲ್ಲ ಒಂದೇ ಧರ್ಮದವರಲ್ಲ ಎಂಬುದಕ್ಕೆ ದ್ಯೋತಕ"; "ಶೂದ್ರರು, ಪಂಚಮರು ತಾವು ಈ ಧರ್ಮಕ್ಕೆ ಸೇರಿದವರೆಂದು ಹೇಳುವುದರಲ್ಲಿಯೇ ಅವರು ನಾಲ್ಕನೇ ಅಥವಾ ಐದನೇ ದರ್ಜೆಯ ಪ್ರಜೆಗಳಾಗಿ ಬಿಡುತ್ತಾರೆ. ವರ್ಣಾಶ್ರಮ ವ್ಯವಸ್ಥೆ ಸಹಿತವಾಗಿ ಈ ಧರ್ಮವನ್ನು ಪ್ರತಿಪಾದಿಸುವುದೆಂದರೆ ಮೇಲು–ಕೀಳು ಎಂಬ ಈ ಅಸಹಜವೂ ಇಂದಿಗೆ ಅನಾಗರಿಕವೂ ಆದ ವ್ಯವಸ್ಥೆಯನ್ನೇ ಮತ್ತೂ ಬಲಪಡಿಸಲು ಯತ್ನಿಸುವುದೇ ಆಗುತ್ತದೆ" ಎಂಬ ಅಭಿಪ್ರಾಯಗಳು ಎಲ್ಲರಿಗೂ ಮನನಯೋಗ್ಯವಾಗಿವೆ. ಹಾಗೆಯೇ, ಶೂದ್ರರಿಗೆ ತಮಗಿಂತ 'ಮೇಲಿನವರಿಗೆ' ನಮಸ್ಕರಿಸಲು ಕೈ ಮತ್ತು 'ಕೆಳಗಿನವರಿಗೆ' ಒದೆಯಲು ಕಾಲು ಸಲ್ಲದು; ಎಲ್ಲರನ್ನೂ ಸಮಾನವಾಗಿ ಕಾಣುವ ಹೃದಯ ಅರಳಬೇಕು ಎಂಬ ಮಾತೂ ಸಹ

ಕೊನೆಯದಾಗಿ

ಎರಡು ತಿಂಗಳ ಕಾಲದ ಈ ಇಡೀ ಪ್ರಯತ್ನ ರೋಗವನ್ನು ಹೋಗಲಾಡಿಸಿ ರೋಗಿಯನ್ನು ಉಳಿಸಿಕೊಳ್ಳುವ (ಗುಣಪಡಿಸಿ) ಪ್ರಯತ್ನ ಎಂಬುದು ಅರ್ಥವಾಗಬಲ್ಲವರಿಗೆಲ್ಲ ಅರ್ಥವಾಗಿದೆ. ಆದರೆ ಹಲವರು ಮಾತ್ರ ಇನ್ನೂ ಸಹ ಇದರಲ್ಲಿ 'ಹಳದಿ ಬಣ್ಣ'ವನ್ನೇ ಕಾಣುತ್ತಿದ್ದಾರೆನ್ನಿಸುತ್ತದೆ.

ಇತ್ತ ದೇವಸ್ಥಾನದ ರುದ್ರಹೋಮ ಸಮಿತಿಯವರು ತಮ್ಮ ಯಾವತ್ತೂ ಅಭಿಪ್ರಾಯಗಳನ್ನು ತಿಳಿಸುವಂತೆ ಎಷ್ಟು ವಿಧದಲ್ಲಿ ಆಹ್ವಾನಿಸಿದರೂ ಮೌನ ಮುರಿದಿಲ್ಲ.

ಅಂತೂ ಕೊನೆಯಲ್ಲಿ, ರುದ್ರಹೋಮದ ಪೂಜಾದಿಗಳಲ್ಲಿ ಭಾಗವಹಿಸುವ ಋತ್ವಿಜರನ್ನು ಜನರನ್ನು ಮಾತ್ರ ಹೊರತುಪಡಿಸಿ, ಉಳಿದವರಿಗೆಲ್ಲ ಒಂದೇ ಪಂಕ್ತಿ ಏರ್ಪಡಿಸಲು ಒಪ್ಪಲಾಗಿದೆ ಎಂಬ ಸಮಾಚಾರವಿದೆ. ಇದು ನಿಜವಿದ್ದಲ್ಲಿ ಇದೊಂದು ಸ್ವಾಗತಾರ್ಹವಾದ ಮೊದಲ ಹೆಜ್ಜೆ. ಇದೊಂದು ಅನಿವಾರ್ಯ ಹೊಂದಾಣಿಕೆ ಎಂಬ 'ಸಂಕಟ'ದಿಂದ ಅನುಸರಿಸುವ ಬದಲು, ಎಲ್ಲರೂ ಹೃತ್ಪೂರ್ವಕವಾಗಿ, ರಚನಾತ್ಮಕವಾಗಿ ಪಾಲ್ಗೊಂಡು ಸಂಪೂರ್ಣ ಸಹಪಂಕ್ತಿ ಭೋಜನದತ್ತ ಸುಧಾರಣೆಗೊಳಿಸುವುದು ಅಪೇಕ್ಷಣೀಯ. ಶೃಂಗೇರಿಯ ಕುಂಭಾಭಿಷೇಕದ ವೇಳೆ 'ಋತ್ವಿಜರ ಪಂಕ್ತಿ'ಗೆ ಬೇರೆ ಬ್ರಾಹ್ಮಣರೂ ಹೋಗುತ್ತಿದ್ದಂಥ ಔದಾರ್ಯಗಳನ್ನಾಗಲಿ, ಊಟಕ್ಕೇ ಹೋಗದ ದುರಾಗ್ರಹವನ್ನಾಗಲೀ ಅನುಸರಿಸದೆ, 'ನಾವೆಲ್ಲ ಒಂದು' ಮುಂತಾದ ಘೋಷಣೆಗಳನ್ನೆಲ್ಲ ಕಾರ್ಯರೂಪಕ್ಕಿಳಿಸಲು ಶ್ರಮಿಸುವುದು ಕೇವಲ ಮನುಷ್ಯತ್ವದ ದೃಷ್ಟಿಯಿಂದಲಾದರೂ ಅಗತ್ಯ ಹಾಗೂ ಶ್ರೇಯಸ್ಕರ.

(ಇಲ್ಲಿಗೆ ಈ ವಿಚಾರವನ್ನು ಸಮಾಪ್ತಿಗೊಳಿಸೋಣವೆ?—**ಸಂ.**)

ಸಹಕಾರ ಸಂಘಗಳ ಮೂಲಕ ಹಂಚುವ ಬೆಳೆ ಸಾಲಗಳನ್ನು 'ಸಾಲಮೇಳ'ದಲ್ಲಿ ನೀಡುವುದಕ್ಕೆ ವಿರೋಧ

ಸಹಕಾರ ಸಂಘಗಳ ಮೂಲಕ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನವರು ಹಂಚುವ ಬೆಳೆ ಸಾಲವನ್ನು ಈ ವರ್ಷ ಏಪ್ರಿಲ್-ಮೇ ತಿಂಗಳಲ್ಲೇ ಹಂಚಲಾಗುತ್ತಿದ್ದು, ಇದೊಂದು ದಾಖಲೆಯಾಗಿದೆ ಎಂದು ಜಿಲ್ಲಾ ಬ್ಯಾಂಕ್ ಅಧ್ಯಕ್ಷ ಕಚ್ಚೋಡಿ ಶ್ರೀನಿವಾಸ್ ತಿಳಿಸಿದ್ದಾರೆ.

ಶೃಂಗೇರಿ ತಾ॥ನಲ್ಲಿ 9 ಲಕ್ಷ ರೂ. ಸಾಲವನ್ನು ಈಗಾಗಲೇ ಹಂಚಲಾಗಿದ್ದು ಕೊಪ್ಪ ಮತ್ತು ನ. ರಾ. ಪುರ ತಾ॥ಗಳಲ್ಲಿ ಒಟ್ಟು ಸುಮಾರು 45 ಲಕ್ಷ ರೂ. ಸಾಲಗಳನ್ನು ಹಂಚಲಾಗುತ್ತಿದೆ (ಇದರಲ್ಲಿ ಕೊಪ್ಪ ತಾ॥ಗೆ 38 ಲಕ್ಷ ರೂ.) ಪ್ರತಿವರ್ಷ ಈ ಸಾಲದ ಮೊದಲ ಬ್ಯಾಚ್‌ನ ಮಂಜೂರಾತಿಯೇ ಜೂನ್ ಜುಲೈ ತಿಂಗಳಲ್ಲಿ ಆಗುತ್ತಿತ್ತು. ಈ ಬಾರಿ ಜಿಲ್ಲಾ ಬ್ಯಾಂಕು ವಿಶೇಷ ಶ್ರಮ ವಹಿಸಿ, ಅದಷ್ಟೂ ಹೆಚ್ಚು ಅರ್ಜಿಗಳನ್ನು ಮೊದಲ ಬ್ಯಾಚ್‌ನಲ್ಲೇ ವಿತರಿಸುತ್ತಿದೆಯಲ್ಲದೆ, ಮಂಜೂರಾತಿಯನ್ನು ಸಹ ಸುಮಾರು 2 ತಿಂಗಳಿನಷ್ಟು ಬೇಗನೆ ಮುಗಿಸಿದೆ ಎಂದು ಅವರು ಬ್ಯಾಂಕಿನ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡರು.

ಸಾಲ ಮೇಳ ?

ಈ ಸಾಲಗಳ ಚೆಕ್‌ಗಳನ್ನು ಸಾರ್ವಜನಿಕ ಸಮಾರಂಭದಲ್ಲಿ ಮಂತ್ರಿಗಳ ಕೈಯಿಂದ ವಿತರಿಸುವ ಒಂದು ಕ್ರಮವನ್ನು ರೂಢಿಗೆ ತರಲಾಗುತ್ತಿದೆ. ಶೃಂಗೇರಿ ತಾ॥ನಲ್ಲಿ ಇದೇ ರೀತಿ 'ಸಾಲ ಮೇಳ'ಗಳಲ್ಲೇ ಚೆಕ್ ವಿತರಿಸಲಾಗಿದೆ ಎಂದು ಸುದ್ದಿ.

ಆದರೆ ಈ ಕ್ರಮಕ್ಕೆ ಬಲವಾದ ವಿರೋಧ ವ್ಯಕ್ತವಾಗಿದೆ. ಕೊಪ್ಪ ತಾ॥ನಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಸುಮಾರು 16 ಲಕ್ಷ ರೂ.ಗಳನ್ನು ಈ ಸಾಲದ ರೂಪದಲ್ಲಿ ನೀಡುತ್ತಿರುವ ಅತ್ತಿಕೊಡಿಗೆ ಸಹಕಾರ ಸಂಘದ ಚೆಕ್‌ಗಳನ್ನು ಬಿಳಾಲುಕೊಪ್ಪದಲ್ಲಿ ಮೇ 18ರಂದು ನಡೆದ ತಾಳಿಭಾಗ್ಯ ಸಮಾರಂಭದ ದಿನ ವಿತರಿಸಲು ಯೋಚಿಸಿದ್ದನ್ನು ಅಲ್ಲಿನ ಸಾಲಗಾರರು ತೀವ್ರವಾಗಿ ವಿರೋಧಿಸಿ, ಈ ಸಾಲಮೇಳ ನಡೆಸದಂತೆ ಒತ್ತಡ ತಂದರು.

ಆದರೆ ಇದರಿಂದ, ಸಾಲ ಇಷ್ಟು ಬೇಗ ಸಿಗಲು ಬಹಳ ಮುತುವರ್ಜಿ ವಹಿಸಿದ್ದ ಕಚ್ಚೋಡಿ ಶ್ರೀನಿವಾಸ್‌ಗೆ ಸಾಕಷ್ಟು ಅಸಮಾಧಾನವಾದಂತೆ ಕಂಡುಬರುತ್ತಿದೆ.

ಆದರೆ ಈ 'ಸಾಲಮೇಳ'ವನ್ನು ವಿರೋಧಿಸಿದವರ ವಾದವನ್ನು ಅವರು ಸ್ವಲ್ಪ ಪರಿಶೀಲಿಸುವುದು ಯುಕ್ತ.

ಜನಾರ್ದನ ಪೂಜಾರಿ ಸಾಲ ಮೇಳ ಮಾಡಿದರೆ, ಅಲ್ಲವರು ಯಾವುದೇ ಅಡವು–ಆಧಾರ ಇಲ್ಲದೆ ಸಾಲಗಾರನ ವೈಯಕ್ತಿಕ ಜವಾಬ್ದಾರಿಯ ಮೇಲೆ ಸಾಲ ಕೊಡುತ್ತಾರೆ ಅಲ್ಲದೆ ಆ ಯೋಜನೆಯನ್ನು ಜಾರಿಗೆ ತಂದವರೂ ಅವರೇ (ಕೇಂದ್ರ ಸರ್ಕಾರವೇ.) ಆದರೆ ಬೆಳೆ ಸಾಲ ಹಾಗಲ್ಲ. ರೈತರ ಆಸ್ತಿ

(4ನೇ ಪುಟಕ್ಕೆ)

ಓದುಗರ ಪತ್ರ

"ಹಲ್ಲೆ ನಡೆದದ್ದು ನಿಜ, ಆದರೆ ಠಾಣೆಯಲ್ಲಿ ಹೊಡೆಯಲಿಲ್ಲ"

"ಮುಂಜಾವು" ಪತ್ರಿಕೆ ಸಂಪಾದಕರಿಗೆ,

ಮಾನ್ಯರೆ,

ನಿಮ್ಮ ಪತ್ರಿಕೆಯ 18.5.86ರ ಸಂಚಿಕೆಯ ವರದಿಯಲ್ಲಿ ಭಾರತ್ ರೈಸ್ ಮಿಲ್ ಬಳಿ ನನ್ನ ಮೇಲೆ ಹಲ್ಲೆ ನಡೆದ ಬಗ್ಗೆ ಬರೆದ ವಿಚಾರವೆಲ್ಲ ಸತ್ಯವಾಗಿದೆ. ಆದರೆ ಅನಂತರ ಠಾಣೆಯಲ್ಲೂ ನನಗೆ ಥಳಿಸಲಾಯಿತು ಎಂಬ ವಿಚಾರ ಸತ್ಯವಲ್ಲ. ನನಗೆ ಠಾಣೆಯಲ್ಲಿ ಹೊಡೆಯಲಿಲ್ಲ.

—**ಬಾಲಾಜಿ,** ಡ್ರೈವರ್, ಕೊಪ್ಪ.

ಚಂದಾ ಹಣ ಕಳಿಸಿ
ಸ ಹ ಕ ರಿ ಸಿ

ಮಿಶ್ರತಳಿ ಹಸುಗಳ ಆರೋಗ್ಯ ತಪಾಸಣೆ ಶಿಬಿರಕ್ಕೆ ಯತ್ನ

ಕೊಪ್ಪದಲ್ಲಿ ಜೂನ್ 5-6ರೊಳಗಾಗಿ ಮಿಶ್ರ ತಳಿ ದನ-ಕರುಗಳ ಆರೋಗ್ಯ ತಪಾಸಣೆ ಶಿಬಿರವೊಂದನ್ನು ನಡೆಸಲು ಪ್ರಯತ್ನಗಳು ನಡೆಯುತ್ತಿವೆ.

ಮಿಶ್ರತಳಿ ದನ ಕರುಗಳ ಆರೋಗ್ಯ ಪರೀಕ್ಷೆ ಮತ್ತು ಚಿಕಿತ್ಸೆ, ದನ-ಎಮ್ಮೆಗಳಿಗೆ ಕೃತಕ ಗರ್ಭಧಾರಣೆ, ಬರಡು ಎಮ್ಮೆಗಳಿಗೆ ಗರ್ಭಧರಿಸಲು ಸಾಧ್ಯವಾಗುವಂತೆ ಹಾರ್ಮೋನ್ ಚಿಕಿತ್ಸೆ ನೀಡುವುದು ಹಾಗೂ ಮಿಶ್ರ ತಳಿ ಹಸು ಸಾಕಣೆ ಮತ್ತು ಕ್ಷೀರೋದ್ಯಮ ಕುರಿತಂತೆ ವಿಚಾರ ಸಂಕಿರಣ - ಇವಿಷ್ಟು ಉದ್ದೇಶಿಸಲಾಗಿರುವ ಕಾರ್ಯಕ್ರಮಗಳು.

ಈ ಯತ್ನ ಫಲ ನೀಡಿ, ಶಿಬಿರ ವ್ಯವಸ್ಥೆಯಾದಲ್ಲಿ ನಿರ್ದಿಷ್ಟ ತಾರೀಖು ಮತ್ತಿತರ ವಿವರಗಳನ್ನು ಮುಂದೆ ತಿಳಿಸಲಾಗುವುದು ಪಶು ವೈದ್ಯ ಇಲಾಖೆ, ಕೃಷಿ ವಿಚಾರ ವಿನಿಮಯ ಕೇಂದ್ರ, ಗೋಲ್ಡ್ ಮೊಹರ್ ಪಶು ಆಹಾರ ತಯಾರಿಕಾ ಸಂಸ್ಥೆ ಮತ್ತು ಲಯನ್ಸ್, ರೋಟರಿಗಳಂಥ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಸಲು ಯೋಜಿಸಲಾಗುತ್ತಿದೆ.

ಮಲೆನಾಡಿನಲ್ಲಿ ಹೈನುಗಾರಿಕೆಗೆ ಅತ್ಯಂತ ಪ್ರಶಸ್ತವಾದ ಸನ್ನಿವೇಶವಿದೆಯೆನ್ನಲಾಗಿರುವುದರಿಂದ ಹಾಸನದ ಸಹಕಾರಿ ಡೈರಿಯನ್ನು ಪುನಶ್ಚೇತನಗೊಳಿಸಿ, ಮಲೆನಾಡಿನಲ್ಲಿ ಹೈನುಗಾರಿಕೆ ಅಭಿವೃದ್ಧಿಗೆ ವ್ಯಾಪಕ ಕಾರ್ಯಕ್ರಮ ಆರಂಭಿಸಲಾಗುವುದೆಂದು ಸಚಿವ ಗೋವಿಂದ ಗೌಡರು ಆಶ್ವಾಸನೆಯಿತ್ತು ಕಾರ್ಯೋನ್ಮುಖರಾಗಿರುವ ಹಿನ್ನೆಲೆಯಲ್ಲಿ, ರೈತರನ್ನು ಈ ದಿಕ್ಕಿನಲ್ಲಿ ಹುರಿದುಂಬಿಸುವ ಒಂದು ಪ್ರಯತ್ನವಾಗಿ ಇಂಥದೊಂದು ಶಿಬಿರವನ್ನು ನಡೆಸಲು ಯತ್ನಿಸಲಾಗುತ್ತಿದೆಯೆಂದು ತಿಳಿದುಬಂದಿದೆ.

ಹಳಸಿದ ಅನ್ನ ತಿಂದು ದನಗಳ ಸಾವು

ಹಾಲ್ಮುತ್ತೂರು: ಇಲ್ಲಿಗೆ ಸಮೀಪದ ಕುರುವಳ್ಳಿಯ ದೇವಸ್ಥಾನದಲ್ಲಿ ಏ. 28ರಂದು ನಡೆದ ಶತ ಚಂಡಿಕಾ ಯಾಗಕ್ಕೆ ಸುಮಾರು 4-5 ಸಾವಿರ ಜನರನ್ನು ನಿರೀಕ್ಷಿಸಿ ಮೂರು ಕ್ವಿಂಟಾಲುಗಳಷ್ಟು ಅಕ್ಕಿಯ ಅನ್ನ, ಸಾರು ವಗೈರೆ ಮಾಡಿದ್ದು, ಕೇವಲ 1 ಸಾವಿರ ಜನ ಮಾತ್ರ ನೆರೆದುದರಿಂದ ಉಳಿದ ಆಹಾರ ಪದಾರ್ಥಗಳನ್ನೆಲ್ಲ ಸಮೀಪದ ಅಗಳಿಗೆ ಎಸೆದಿದ್ದರಿಂದೂ, ಮರುದಿನ ಹಳಸಿದ ಅವುಗಳನ್ನು ತಿಂದು 3-4 ಜಾನುವಾರುಗಳು ಸತ್ತವೆಂದೂ ತಿಳಿದು ಬಂದಿದೆ. ಈಗಲೂ ಆ ದುರ್ನಾತದಿಂದ ಅಲ್ಲಿ ಓಡಾಡುವುದು ಕಷ್ಟವಾಗುತ್ತಿದೆಯೆಂದು ಅಲ್ಲಿನವರ ಹೇಳಿಕೆ.

ಕಳೆದ ವರ್ಷ ಇದೇ ಸಮಾರಂಭದಲ್ಲಿ ಅನ್ನ ಕಡಿಮೆಯಾಗಿ, ಹಲವರಿಗೆ ಊಟ ಸಿಗದಿದ್ದುದರಿಂದ ಅವರೆಲ್ಲಾ ಬೈದುಕೊಂಡು ಹೋದ ಘಟನೆ ನಡೆದಿತ್ತೆಂದೂ, ಆದ್ದರಿಂದ ಈ ವರ್ಷ ಇಷ್ಟೆಲ್ಲಾ ರಂಪಕ್ಕೆ ಕಾರಣವಾಯಿತೆಂದೂ ಕೆಲವರು ಹೇಳುತ್ತಾರೆ. ಆ ಹೆಚ್ಚಾದ ಪದಾರ್ಥಗಳನ್ನು ಹಾಗೆ ಹಾಳು ಮಾಡುವುದರ ಬದಲಾಗಿ ಬಡ ಬಗ್ಗರಿಗೆ ದಾನ ಮಾಡ ಬಹುದಿತ್ತು ಎಂಬುದು ಎಲ್ಲರ ಅಭಿಪ್ರಾಯವಾಗಿದೆ.

ಇನ್ನು ಮುಂದಾದರೂ ಈ ರೀತಿಯ ಅವ್ಯವಸ್ಥೆಯುಂಟಾಗದಂತೆ ದೇವಸ್ಥಾನದ ಕಸ್ಟೋಡಿಯನ್‌ರು ತುಂಬಾ ಎಚ್ಚರಿಕೆ ವಹಿಸಬೇಕೆಂಬುದು ಸಾರ್ವಜನಿಕರೆಲ್ಲರ ಕೋರಿಕೆಯಾಗಿದೆ

ಬೆಳಗೊಳ: ಬಾವಿಗೆ ಆಗ್ರಹ

ಕೊಪ್ಪ: ನಾರ್ವೆ ಸಮೀಪದ ಬೆಳಗೊಳದಲ್ಲಿ ಸುಮಾರು ಹದಿನೈದಿಪ್ಪತ್ತು ಮನೆಗಳಿದ್ದು (ದಲಿತರ ಕಾಲೊನಿಯಲ್ಲಿ) ಅಲ್ಲಿದ್ದ ಒಂದೇ ಸಣ್ಣ ಬಾವಿಯಲ್ಲಿ ನೀರು ಬತ್ತಿದೆ. ಬೇರೆ ಬಾವಿ ಮಾಡಿಸಿಕೊಡಲು ಅಲ್ಲಿನ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲ ಅರ್ಜಿಗಳನ್ನು ಕೊಡುತ್ತಾ ಬಂದಿದ್ದರೂ ಪ್ರಯೋಜನವಾಗಿಲ್ಲ. ಇಲ್ಲಿರುವವರೆಲ್ಲ ಬಹುತೇಕ ಬಡ ರೈತರಾಗಿದ್ದು, ಶೀಘ್ರವಾಗಿ ಒಂದು ಬಾವಿ ಮಾಡಿಸಿಕೊಡುವಂತೆ ಸಂಬಂಧಪಟ್ಟವರನ್ನು ಒತ್ತಾಯಿಸಿದ್ದಾರೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಈ ಕಡೆ ತುರ್ತು ಗಮನ ನೀಡಬೇಕಾಗಿದೆ.

ಬೆಳೆ ಸಾಲ: 'ಮೇಳ'ಕ್ಕೆ ವಿರೋಧ

ಪಾಸ್ತಿ ಅಡವಾಗಿಟ್ಟುಕೊಂಡು ಕೊಡುವಂಥದು. ರಾಜ್ಯ ಸರ್ಕಾರದ ಅಥವಾ ಜನತಾ ಪಕ್ಷದ ಯಾವುದೋ ಯೋಜನೆಯೊಂದರಿಂದ ಕೊಡುವಂಥದೋ ಅಥವಾ ಅವರ ವಿಶೇಷ ನೆರವಿನಿಂದಲೇ ಆರಂಭವಾದಂಥದೊ ಆದರೆ ಅವರು ಸಮಾರಂಭಗಳನ್ನು ಮಾಡಿಕೊಳ್ಳಬಹುದಿತ್ತು—'ತಾಳಿ ಭಾಗ್ಯ' ಹೆರಿಗೆ ಭತ್ಯ ಮುಂತಾದುವಕ್ಕೆ ಮಾಡಿದಂತೆ.

ಎರಡನೆಯದಾಗಿ, ಈ ಬೆಳೆ ಸಾಲಗಾರರಲ್ಲಿ ಎಷ್ಟೋ ಜನಕ್ಕೆ ತಾವು ಸಾಲ ಮಾಡುತ್ತಿರುವುದು ಬಹಿರಂಗವಾಗಿ ಬೀಧಿಯ, ವೇದಿಕೆಯ ವಿಷಯವಾಗುವುದು ಒಗ್ಗುವಂಥದಲ್ಲ. ಸಾಲ, ಠೇವಣಿ ಮುಂತಾದ ವಿಚಾರಗಳಲ್ಲಿ ಗೌಪ್ಯ ಕಾಪಾಡಬೇಕೆಂದು ಬ್ಯಾಂಕಿನ ನಿಯಮವೇ ಇದೆ. ಹೀಗಿರುವಾಗ ಸಾಲ ಮೇಳದಲ್ಲಿಯೇ ಸಾಲದ ಚೆಕ್ ಪಡೆಯಬೇಕೆಂದು ಒತ್ತಾಯಿಸುವುದು ಒಂದು ರೀತಿಯಲ್ಲಿ ಕ್ರೌರ್ಯ, ಜೊತೆಗೆ ಸಂವಿಧಾನ ಬಾಹಿರ ಕೂಡ ಆಗುತ್ತದೆ

ಇದು ಅವರುಗಳ ವಾದ. ಇದರಲ್ಲಿ ಏನು ತಪ್ಪಿದೆ?

ಈ ಬಾರಿ ಬೇಗ ಸಾಲ ಸಿಕ್ಕಿರುವುದರ ಬಗ್ಗೆ ಪ್ರತಿಯೊಬ್ಬ ರೈತನೂ ಸಂತುಷ್ಟನಾಗಿಯೇ ಇರುತ್ತಾನೆ. ರೈತರ ಈ ಮೆಚ್ಚಿಗೆಯನ್ನು, ಕೃತಜ್ಞತೆಯನ್ನು ಲೆಕ್ಕವಾಗಿ ಪರಿವರ್ತಿಸಲು ಹೆಣಗುವ ಅಗತ್ಯವಿದೆಯೆ? ಎಂದು ಯುವ ಮುಖಂಡ ಕಚ್ಚೋಡಿ ಶ್ರೀನಿವಾಸ್ ಶಾಂತವಾಗಿ ಯೋಚಿಸುವುದು ಯುಕ್ತ. ತಮಗೆ ಸಾಧ್ಯವಿರುವಾಗ ಇಂಥ ಹತ್ತು ಬಗೆಯಲ್ಲಿ ಜನಕ್ಕೆ ಉಪಯೋಗ ಮಾಡಿಕೊಟ್ಟರೆ ಅದೇ ಅವರ ಘನತೆಯನ್ನು, ಅವರ ಬಗ್ಗೆ ಜನತೆಯ ವಿಶ್ವಾಸವನ್ನು ಬೆಳೆಸುವುದಲ್ಲವೆ? ಅದಕ್ಕೆ ಇಂಥ ಸರ್ಕಸ್ಸೆಲ್ಲ ಬೇಕೆ?

ಟೀ ತೋಟಗಳ ಫ್ಯಾಕ್ಟರಿ ಕಾರ್ಮಿಕರ ಬೇಡಿಕೆ ಬಗ್ಗೆ

ಮಾಲೀಕರ ಹಠಮಾರಿತನ: ಚಳುವಳಿ ನಿರ್ಧಾರ

ಕೊಪ್ಪ: ಎ.ಐ.ಟಿ ಯು.ಸಿ.ಗೆ ಸೇರ್ಪಡೆಗೊಂಡಿರುವ ಕರ್ನಾಟಕ ಎಸ್ಟೇಟ್ ಮತ್ತು ಇತರೆ ಕೆಲಸಗಾರರ ಸಂಘವು ಟೀ ತೋಟದ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹೆಚ್ಚಿನ ಸಂಬಳ, ಸಮವಸ್ತ್ರ, ರಕ್ಷಣೆ ಸೌಲಭ್ಯ ಮತ್ತು ರಾತ್ರಿ ಪಾಳಿಗೆ ಭತ್ಯ ಮುಂತಾದುವನ್ನು ಒದಗಿಸಬೇಕೆಂದು ಒತ್ತಾಯಿಸಿ, 8-10-84ರಂದು ಬೇಡಿಕೆ ಪತ್ರವನ್ನು ಸಂಬಂಧಪಟ್ಟ ಮಾಲೀಕರಿಗೆ ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಹಲವಾರು ದ್ವಿಪಕ್ಷೀಯ ಚರ್ಚೆ ನಡೆದಿದ್ದರೂ ಮಾಲೀಕರ ಹಠಮಾರಿತನ ಮತ್ತು ಕಾಲಹರಣ ನೀತಿಯಿಂದಾಗಿ ಯಾವುದೇ ತೀರ್ಮಾನವಾಗಿಲ್ಲ.

13-5-86ರಂದು ಮತ್ತೊಮ್ಮೆ ದ್ವಿಪಕ್ಷೀಯ ಮಾತುಕತೆಗೆ ಆಹ್ವಾನಿಸಲಾಗಿತ್ತಾದರೂ ಅಂದು ಸಹ ಮಾಲೀಕರು ಕಾಲಹರಣ ನೀತಿಯನ್ನು ಅನುಸರಿಸಿ ಬೇಡಿಕೆ ಬಗ್ಗೆ ಅಸಡ್ಡೆ ತೋರಿಸಿದ ಕಾರಣ ಎ. ಐ.ಟಿ. ಯು.ಸಿ. ಪರವಾಗಿ ಹಾಜರಿದ್ದ ಎಲ್ಲಾ ಪ್ರತಿನಿಧಿಗಳು ಈ ಸಭೆಯನ್ನು ಬಹಿಷ್ಕರಿಸಿ ವಾಪಾಸ್ಸಾಗಿದ್ದಾರೆ. ಅಲ್ಲದೆ ಮಾಲೀಕರ ಈ ವರ್ತನೆಯನ್ನು ವಿರೋಧಿಸಿ ಮತ್ತು ತಮ್ಮ ಕೇಳಿಕೆಯನ್ನು ಒತ್ತಾಯಿಸಿ ಚಳುವಳಿಯನ್ನು ನಡೆಸಲು ತೀರ್ಮಾನಿಸಲಾಗಿದೆ.

ಅದರಂತೆ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಡುಮನೆ, ಮಾವಿನಕೆರೆ, ಧನಲಕ್ಷ್ಮಿ, ಗುಮ್ಮನಖಾನ್, ಕೆಳಗೂರು, ಮೇರ್ತಿಖಾನ್, ಕರ್ಕಿಕೊಂಡ ಮತ್ತು ದೇವನ ತೋಟದ ಫ್ಯಾಕ್ಟರಿ ಮುಂದೆ ದಿನಾಂಕ: 2-6-86ರಿಂದ ಧರಣಿ ಸತ್ಯಾಗ್ರಹ ನಡೆಸಲು ಹಾಗೂ ಇದಕ್ಕೂ ತೀರ್ಮಾನವಾಗದಿದ್ದರೆ ದಿನಾಂಕ: 10-6-86ರಂದು ಚಳುವಳಿ ನಡೆಸಲು ತೀರ್ಮಾನಿಸಿದ್ದಾರೆಂದು ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸಮುದಾಯ ಜಾಗೃತಿಯ ಸಾಂಸ್ಕೃತಿಕ ಕಾರ್ಯಕ್ರಮ

ಉತ್ತಮೇಶ್ವರ: ಆರೋಗ್ಯ ಇಲಾಖೆಯ ವತಿಯಿಂದ ಮೇ 22ರಂದು ಹರಿಕಥಾ ವಿದ್ವಾನ್ ಜಾಳುಮರ ಸುಬ್ರಾಯ್‌ರವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಹರಿಕಥೆ, ಲಾವಣಿ ಮುಂತಾದುವುಗಳ ಮೂಲಕ ಸುಬ್ರಾಯರು ಕುಟುಂಬ ಯೋಜನೆ, ಮಿತ ಸಂತಾನ, ಮದ್ಯಪಾನ ನಿಷೇಧ, ಪರಿಸರ ಸಂರಕ್ಷಣೆ, ಉಳಿತಾಯ, ಶಿಕ್ಷಣ ಮುಂತಾದುವುಗಳ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಲು ಯತ್ನಿಸುತ್ತಾರೆ.

ಕುಟುಂಬಯೋಜನೆ ಶಿಬಿರ

ಮೇ 21ರಂದು ಇಲ್ಲಿ ಕುಟುಂಬ ಯೋಜನೆ (ಟ್ಯೂಬೆಕ್ಟಮಿ) ಶಿಬಿರವನ್ನು ಕೊಪ್ಪ ವೈದ್ಯಾಧಿಕಾರಿಗಳಾದ ಡಾ|| ಎಂ. ಜಿ. ಪ್ರಸಾದ್‌ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ರೋಗಿಗಳಿಗೆ ಹಾಲಿನ ಪೂರೈಕೆಯನ್ನು ಹಿಂದಿನಂತೆಯೇ ವಿ.ಹಿಂ.ಪ. ಕಾರ್ಯದರ್ಶಿ ವಿ. ರಾಮರಾವ್ ಮತ್ತು ಗ್ರಾಮ ಲೆಕ್ಕಿಗರಾದ ನಾಗರಾಜ್ ವಹಿಸಿದ್ದರು.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಶಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ.

ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿಡಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

5 ನೇ ವರ್ಷ 33ನೇ ಸಂಚಿಕೆ ಕೊಪ್ಪ 1-6-1986 ಭಾನುವಾರ ಬೆಲೆ 20 ಪೈಸೆ

ಉತ್ತಮೇಶ್ವರ: ಮಕ್ಕಳ ಆರೋಗ್ಯತಪಾಸಣೆ, ಮಾನಸಿಕ ರೋಗ ಚಿಕಿತ್ಸಾ ಶಿಬಿರ

ಉತ್ತಮೇಶ್ವರ : ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಮೈಸೂರು ಬ್ಯಾಂಕ್‌ಗಳ ಸಹಯೋಗದಲ್ಲಿ 6.6.86 ಶುಕ್ರವಾರ ಬೆಳಿಗ್ಗೆ 9.30ರಿಂದ ಇಲ್ಲಿ "3 ವರ್ಷದ ಕೆಳಗಿನ ಮಕ್ಕಳ ಶಿಶು ಪ್ರದರ್ಶನ ಮತ್ತು 14 ವರ್ಷದ ಒಳಗಿನ ಮಕ್ಕಳ ಆರೋಗ್ಯ ತಪಾಸಣೆ" ಏರ್ಪಟ್ಟಿದೆ. ಮಕ್ಕಳ ತಜ್ಞರಾದ ಕೊಪ್ಪದ ಡಾ|| ಶ್ರೀಧರ ಹಂದೆ ಮತ್ತು ಶೃಂಗೇರಿಯ ಡಾ|| ಲಕ್ಷ್ಮೀನಾರಾಯಣನ್ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಅದೇ ದಿನ ಮಧ್ಯಾಹ್ನ 3 ಗಂಟೆಗೆ ತೀರ್ಥಹಳ್ಳಿಯ ಮಾನಸ ನರ್ಸಿಂಗ್ ಹೋಂನ ಡಾ|| ಅರುಣಾಚಲರವರಿಂದ ಮಾನಸಿಕ ರೋಗಿಗಳ ತಪಾಸಣೆ ಮತ್ತು ಪೋಷಕರಿಗೆ ಮಾರ್ಗದರ್ಶನ ಕಾರ್ಯಕ್ರಮವಿದೆ.

ಹಾಲು ಉತ್ಪಾದಕರ ಪಟ್ಟು ಬಿಡದ ಪ್ರಯತ್ನಗಳಿಂದ ಚುರುಕಾಗಿ, ಕಾರ್ಯಪ್ರವೃತ್ತವಾಗಿರುವ ಹಾಸನ ಡೈರಿ ನಿಗಮ

ಕೊಪ್ಪ: ಮಲೆನಾಡಿನ ಹಾಲು ಉತ್ಪಾದಕರ ಪಟ್ಟು ಬಿಡದ ಪ್ರಯತ್ನಗಳು ಹಾಗೂ ಅದಕ್ಕೆ ಸಚಿವ ಗೋವಿಂದಗೌಡರು ಸಕಾಲಿಕವಾಗಿ ಸ್ಪಂದಿಸಿದ್ದರ ಪರಿಣಾಮವಾಗಿ ಹಾಸನದ ಡೈರಿ ನಿಗಮ ಸ್ವಲ್ಪ ಚುರುಕಾಗಿ ಕಾರ್ಯಪ್ರವೃತ್ತವಾಗಿರುವಂತೆ ಕಂಡು ಬರುತ್ತಿದೆ.

ಬಾಳೆಹೊನ್ನೂರಿನಲ್ಲಿ ಬಹಳ ಕಾಲದಿಂದ ಖಾಲಿ ಇದ್ದ ವಿಸ್ತರಣಾಧಿಕಾರಿ ಹುದ್ದೆಗೆ ಹಿರಿಯ ಅನುಭವಿ ಅಧಿಕಾರಿಯಾದ ವೀರಣ್ಣ ಶೆಟ್ಟಿ ಎಂಬವರು ನೇಮಕವಾಗಿದ್ದು, ಅವರು ಈಗಾಗಲೇ ಈ ಭಾಗದ ಉತ್ಪಾದಕರನ್ನು ಭೇಟಿ ಮಾಡಿ ಇಲ್ಲಿನ ಪರಿಸ್ಥಿತಿಯ ಆಮೂಲಾಗ್ರ ಅಧ್ಯಯನ, ಹಾಲಿನ ಸೊಸೈಟಿಗಳ ಸ್ಥಾಪನೆ ಬಗ್ಗೆ ಸಲಹೆ–ಸಮಾಲೋಚನೆ ಹಾಗೂ ಕ್ಷೀರೋದ್ಯಮದ ವಿವಿಧ ಸಾಧ್ಯಾಸಾಧ್ಯತೆಗಳ ಪರಿಶೀಲನೆ ನಡೆಸಿದ್ದಾರೆ.

ಕೊಪ್ಪದ ಹಾಲು ಉತ್ಪಾದಕರ ಸಂಘವನ್ನು ಜೂನ್ 10ರೊಳಗೆ ನೊಂದಾಯಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ನಂತರ ಹರಿಹರಪುರ, ಅಡ್ಡಗದ್ದೆ, ಜಯಪುರ ಮತ್ತು ಬಸರಿಕಟ್ಟೆಗಳಲ್ಲಿ ಸಹ ಇಂಥ ಸಂಘಗಳನ್ನು ಶೀಘ್ರದಲ್ಲೇ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ.

ಅನಂತರ, ಜಯಪುರ, ಕೊಪ್ಪ, ಹರಿಹರಪುರ, ಅಡ್ಡಗದ್ದೆ, ಶೃಂಗೇರಿ, ಮೆಣಸೆ, ಜಯಪುರ ಮಾರ್ಗದಲ್ಲಿ ಹಾಲಿನ ವ್ಯಾನ್ ಓಡಿಸುವ ಕುರಿತು ಸಹ ಪೂರ್ವಭಾವಿ ಸಿದ್ಧತೆ ನಡೆದಿದೆ. ಕಮ್ಮರಡಿಯ ಕಡೆ ಸಹ ಹಾಲು ಉತ್ಪಾದಕರು ಆಸಕ್ತಿ ತೋರಿಸಿರುವರೆನ್ನಲಾಗಿದ್ದು, ಬಂಡಿಗಡಿ, ಹಾಲ್ಮುತ್ತೂರು, ಕಮ್ಮರಡಿ, ಬಿದರಗೋಡು, ಬೇಗಾರು, ನಿಲುವಾಗಿಲು, ಶಾನುವಳ್ಳಿಗಳ ಕಡೆ ಸಹ ಹೆಚ್ಚು ಜನ ರೈತರು ಆಸಕ್ತಿ ವಹಿಸಿದರೆ 2ನೇ ಹಂತದಲ್ಲಿ ಈ ಮಾರ್ಗದಲ್ಲಿ ಸಹ ವ್ಯಾನ್ ಓಡಿಸುವ ಯೋಚನೆ ಇದೆ.

ಈ ಮಧ್ಯೆ ಹಾಸನದ ಡೈರಿಗೆ ಈಗಾಗಲೇ ಹಾಲು ಸರಬರಾಜು ಹೆಚ್ಚುವರಿಯಾಗುತ್ತಿದೆಯೆಂಬ ಸಮಾಚಾರವಿದ್ದು, ಅಲ್ಲಿನ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಬೇಕು. ಇಲ್ಲವೇ ಇಲ್ಲಿನ ಹಾಲನ್ನು ಮಂಗಳೂರು ಘಟಕಕ್ಕೆ ರವಾನಿಸುವ ವ್ಯವಸ್ಥೆ ಮಾಡಬೇಕು ಎಂದು ಉತ್ಪಾದಕರು ಸಚಿವರನ್ನು ಒತ್ತಾಯಿಸಿದ್ದಾರೆ.

ಈ ಎಲ್ಲ ಪ್ರಯತ್ನಗಳು ಸುಸೂತ್ರವಾಗಿ ಮುಂದುವರಿದಲ್ಲಿ ಇನ್ನು ಒಂದೆರಡು ತಿಂಗಳೊಳಗೆ ಈ ಭಾಗದಲ್ಲಿ ದಿನವಹಿ ಎರಡು ಹೊತ್ತೂ ಹಾಲು ಸಂಗ್ರಹ ಮತ್ತು ರವಾನೆಯ ವ್ಯವಸ್ಥೆಯಾಗುತ್ತದೆ.

ಈ ಕನಸು ತಿರುಕನ ಕನಸಾಗದೆ ನನಸಾಗಬೇಕು. ಈ ಹಿಂದೆಯೇ 'ಮುಂಜಾವು' ಬರೆದಿದ್ದಂತೆ, ಜಮೀನು–ಆಸ್ತಿ–ಪಾಸ್ತಿಯಿಲ್ಲದವರು ಸಹ ಆರ್ಥಿಕವಾಗಿ ಸಾಕಷ್ಟು ಉತ್ತಮ ಸ್ಥಿತಿ ಹೊಂದಲು ಇದು ಬೇರೆಲ್ಲ ಮಾರ್ಗಗಳಿಗಿಂತ ಉತ್ತಮವಾದುದು. ಆದ್ದರಿಂದ ಈ ಪ್ರದೇಶದ ಹೇಳಿ ಮಾಡಿಸಿದಂಥ ಸನ್ನಿವೇಶವನ್ನು ಸಂಪೂರ್ಣವಾಗಿ ದುಡಿಸಿಕೊಳ್ಳಲು ಡೈರಿ ನಿಗಮ ಸಮರ್ಥವಾಗಬೇಕು.

ಈ ಪ್ರಯತ್ನಗಳಿಗೆ ಸರ್ಕಾರದ ನಿರ್ಲಕ್ಷ್ಯವಾಗಲಿ, ಹಣಕಾಸಿನ ಕೊರತೆಯಾಗಲಿ, ಅಧಿಕಾರಶಾಹಿಯ ಕಂಪ್ಯೂಟರ್ ಹೃದಯದ ಬೇಜವಾಬ್ದಾರಿತನವಾಗಲಿ ಬೆನ್ನಲ್ಲಿ ಚೂರಿ ಇರಿಯದಂತೆ ಈ ಇಡೀ ಯೋಜನೆಯನ್ನು ದಡಕ್ಕೊಯ್ಯುವ ಜವಾಬ್ದಾರಿ ಗೋವಿಂದಗೌಡರ ಪಾಲಿಗಿದೆ. ನಾಲ್ಕು ವರ್ಷದ ಹಿಂದೆ ಆಗಿನ ಸರ್ಕಾರ ಅರ್ಧಂಬರ್ಧ ವ್ಯವಸ್ಥೆ ಮಾಡಿ ಬಡ ರೈತರನ್ನು ಅರ್ಧ ಕೊಂದ ಅನುಭವ ಅವರೆದುರಿಗಿದೆ.

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
13.5.86	184	106
14.5.86	207	90
15.5.86	210	84
16.5.86	200	111

ಅಡಿಕೆ ಧಾರಣೆ

ಶಿವಮೊಗ್ಗ

ತಾ|| 30.5.1986

ಸರಕು: 2800 – 3080

ಬೆಟ್ಟೆ : 1640 – 1890

ಗೊರಬಲು: 1005 – 1200

ಸಾಗರ

ತಾ|| 31.5.86

ಚಾಲಿ: ರೂ. 1569 – 1790

ಸಿಪ್ಪೆ ಗೋಟು: ರೂ. 512 – 765

ಆಪಿ: ರೂ. 3209 – 3509

"ಕಾಡಿನ ಸಂಪೂರ್ಣ ನಾಶ, ಆ ಮೂಲಕ ನಾಡಿನ 'ನಿಧಾನ ಮರಣ' ತಡೆಗಟ್ಟಲು ನಮಗುಳಿದಿರುವುದು ಇನ್ನು ಐದೇ ವರ್ಷ" — ತಜ್ಞರು.

ನೂತನ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳಿಂದ ಕೊಪ್ಪದ ನಾಗರಿಕರ ಭೇಟಿ, ವಿಚಾರ ವಿನಿಮಯ

ಜಿಲ್ಲೆಯ ನೂತನ ಪೋಲೀಸ್ ಮುಖ್ಯಾಧಿಕಾರಿ ಸುಸಂತ್ ಮಹಾ ಪಾತ್ರ ಅವರು ಜೂನ್ 1ರಂದು ಕೊಪ್ಪ ಠಾಣೆಯಲ್ಲಿ ನಾಗರಿಕರ ಸಭೆ ಕರೆದು ಊರಿನ ಪೋಲೀಸ್ ವ್ಯವಸ್ಥೆಯ ಬಗ್ಗೆ ಚರ್ಚೆ ನಡೆಸಿದರು.

'ಈಚೆಗಿನ ಪೋಲೀಸ್ ಸೇವೆಯ ಬಗ್ಗೆ' ಅವರು ವಿಚಾರಿಸಿದರು. ಸಭೆಯಲ್ಲಿ ಎಲ್ಲ ಪಕ್ಷದವರಿದ್ದರೂ ಎಲ್ಲರೂ ಇದರ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ನ್ಯಾಯವಾಗಿ ದುಡಿದು, ಸುಸಂಸ್ಕೃತವಾಗಿ ಬದುಕುವ ಯಾರೂ ದುರ್ಗಯ್ಯನವರ ಬಗ್ಗೆ ದೂರುತ್ತಿಲ್ಲವೆಂಬ ಅಭಿಪ್ರಾಯ ಬಂತು.

ರಾತ್ರಿ ಗಸ್ತು ಹೆಚ್ಚು ಕ್ರಮಬದ್ಧವಾಗಿ ನಡೆಯುತ್ತಿದ್ದು, ಕಳ್ಳರ ಹಾವಳಿ ಕಮ್ಮಿಯಾಗಿದೆ. ಆದರೆ ಇನ್ನೂ ವ್ಯಾಪಕ ಗಸ್ತಿಗೆ ಸಿಬ್ಬಂದಿ ಕೊರತೆಯಿದೆಯೆಂದು ಹೇಳಲಾಗಿದೆ ಎಂದಾಗ ಸಿಬ್ಬಂದಿಯ ಮಂಜೂರಾತಿ ಗೃಹ ಸಚಿವಾಲಯದಿಂದ ಆಗಬೇಕಿದ್ದು, ಸದ್ಯ ಇದ್ದುದರಲ್ಲಿ ಹೆಚ್ಚು ಬಿಗಿಯಾದ ಕಾವಲು ಏರ್ಪಡಿಸುವ ಭರವಸೆಯಿತ್ತರು. "ರಾತ್ರಿ ಒಂದಕ್ಕಿಂತ ಹೆಚ್ಚು ಸಲ, ಬೇರೆ ಬೇರೆ ವೇಳೆಗಳಲ್ಲಿ ತಪಾಸಣೆ ಮಾಡಿ, ರಾತ್ರಿ ಬೀಟ್‌ನವರಿಗೆ ಬೇಕಿದ್ದರೆ ಇಡೀ ದಿನ ವಿಶ್ರಾಂತಿ ಕೊಡಿ" ಎಂದು ಸಬ್ ಇನ್‌ಸ್ಪೆಕ್ಟರಿಗೆ ಆದೇಶಿಸಿದರು.

ಬಸ್‌ಗಳ ಕರ್ಕಶವಾದ ವ್ಯಾಕ್ಯೂಂ ಹಾರ್ನ್‌ಗಳ ಶಬ್ದವನ್ನು ನಿಯಂತ್ರಿಸುವುದು, ಬಸ್‌ಗಳು ಸಮಯಕ್ಕೆ ಸರಿಯಾಗಿ ಹೋಗುವಂತೆ ಕ್ರಮ ಕೈಗೊಳ್ಳುವುದು, ಆಟೋ ರಿಕ್ಷಾಗಳಿಗೆ ಮೀಟರ್ ಅಳವಡಿಕೆ ಅಥವಾ ಕೆಲವು ಪ್ರಮುಖ ಜಾಗಗಳಿಗೆ ದರ ನಿಗದಿಗೊಳಿಸುವುದು, ಯಾವುದೇ ವಾಹನ ಸೌಕರ್ಯಗಳಿಲ್ಲದ ಹಳ್ಳಿಗಳಿಗೆ ಅವು ಪೇಟೆಯಿಂದ 5 ಕಿ. ಮೀ.ಗಿಂತ ಹೊರಗಿದ್ದರೂ ಆಟೋ ರಿಕ್ಷಾ ಒಯ್ಯಲು ಅವಕಾಶ ಕೊಡುವುದು, ಮುಂತಾದ ವಿಚಾರಗಳನ್ನು ಚರ್ಚಿಸಲಾಯಿತು.

ಯಾವುದೇ ನಿರ್ದಿಷ್ಟ ಉದ್ಯೋಗವಾಗಲಿ, ಆಸ್ತಿಪಾಸ್ತಿಯಾಗಲಿ ಇಲ್ಲದ ಅಥವಾ ಇದ್ದರೂ ಅಲ್ಲಿ ದುಡಿಯದ ಕೆಲವರು ಊರಿನಲ್ಲಿ ಪುಂಡಾಟಿಕೆ ನಡೆಸುವುದು, ಸಣ್ಣಪುಟ್ಟ ಜಗಳ–ಹೊಡೆದಾಟಗಳಾದಾಗ 'ಮಧ್ಯವರ್ತಿ'ಗಳಾಗಿ ವರ್ತಿಸಿ ಜನರಿಂದ ದುಡ್ಡು ಕೀಳುವುದು, ತಮ್ಮ ಚಟುವಟಿಕೆಗಳಿಗೆ ಕಡಿವಾಣ ಬೀಳುವ ಸಂದರ್ಭ ಬಂದಲ್ಲಿ ಊರಿನಲ್ಲಿ ದೊಂಬಿ, 'ಬಂದ್', ಮುಂತಾದುವನ್ನು ಹುಟ್ಟು ಹಾಕಿ ಪೋಲೀಸ್ ವ್ಯವಸ್ಥೆಯನ್ನೇ ಬಿಗಿ ತಪ್ಪಿಸಲು ಯತ್ನಿಸುವುದು ಮುಂತಾದುವುಗಳಲ್ಲಿ ನಿರತರಾಗಿದ್ದಾರೆ. ಇಂಥವರ ಚಟುವಟಿಕೆಯನ್ನು ನಿಯಂತ್ರಿಸಬೇಕೆಂಬ ಒತ್ತಾಯ ಬಂದಿತು.

ಪೋಲೀಸರ ಕರ್ತವ್ಯ ನಿರ್ವಹಣೆಯಲ್ಲಿ ರಾಜಕಾರಣಿಗಳು ಬಹಳವಾಗಿ ಮಧ್ಯಪ್ರವೇಶ ಮಾಡುತ್ತಾರೆಂಬ ಪುಕಾರಿದೆ. ಇದರಿಂದ ಉಂಟಾಗುವ ಅಂಕೆ–ಕಂತೆಗಳಿಂದಾಗಿ ಜನರಿಗೆ ಪೋಲೀಸರಲ್ಲಿ ವಿಶ್ವಾಸ ಕುಂದುತ್ತದೆ. ಜೊತೆಗೆ 'ಮಧ್ಯವರ್ತಿ'ಗಳ ಪ್ರವೇಶಕ್ಕೂ ಇದೇ ಕಾರಣವಾಗುತ್ತದೆ. ಆದ್ದರಿಂದ ಠಾಣೆಯಲ್ಲಿ ಬಡಬಗ್ಗರು, ಜನಸಾಮಾನ್ಯರು ಬಂದಾಗ ಠಾಣಾಧಿಕಾರಿಗಳಾಗಲಿ, ದಫೇದಾರ್‌ಗಳಾಗಲಿ ಸಹಾನುಭೂತಿ, ಸೌಜನ್ಯದಿಂದ ವರ್ತಿಸಿದಲ್ಲಿ, ಇಂಥವರ ಪ್ರವೇಶಕ್ಕೆ ಅವಕಾಶವಾಗಲಿ ಅಗತ್ಯವಾಗಲಿ ಇರುವುದಿಲ್ಲ.

ರಾಜಕೀಯ ವ್ಯಕ್ತಿಗಳು ಬೇಕಿದ್ದಲ್ಲಿ ಸಲಹೆ, ಮಾರ್ಗದರ್ಶನ ನೀಡಲಿ. ಆದರೆ ಯಾವುದೇ ಪ್ರಕರಣದಲ್ಲಿ ಇಂಥವರ ಮೇಲೆ ಕ್ರಮ ತೆಗೆದುಕೊಳ್ಳಿ ಅಥವಾ ತೆಗೆದುಕೊಳ್ಳಬೇಡಿ ಅಥವಾ ಹಗುರಾಗಿ ತೆಗೆದುಕೊಳ್ಳಿ ಅಥವಾ ನಿಧಾನ ಮಾಡಿ ಮುಂತಾದ 'ನಿರ್ದೇಶನ'ಗಳನ್ನು ಕೊಡಬಾರದು. ಯಾವನೇ ವ್ಯಕ್ತಿ ರಾಜಕೀಯ ವ್ಯಕ್ತಿಗಳ ಹೆಸರು ಹೇಳಿ ಪೋಲೀಸರನ್ನು 'ಹೆದರಿಸುವ' ಅವಕಾಶ ಇರಬಾರದು. ಪೋಲೀಸ್ ಅಧಿಕಾರಿಗಳು ಯಾವುದೇ ಪ್ರಕರಣದಲ್ಲಿ ಯಾವ ಅಳುಕೂ ಇಲ್ಲದೆ ಕಾನೂನಿಗನುಗುಣವಾಗಿ ನಿರ್ಭೀತಿಯಿಂದ ಕ್ರಮ ಕೈಗೊಳ್ಳಲು ಸಾಧ್ಯವಿರಬೇಕು. ರಾಜಕೀಯದ ಪ್ರವೇಶ ಅಥವಾ ರಾಜಕಾರಣಿಗಳಿಗೆ ಅಂಜಿನಿಷ್ಕ್ರಿಯರಾಗುವಂತಿರಬಾರದು, ಅವರು ಕ್ರೂರವಾಗಿಯೂ ಅಲ್ಲ, ಆದರೆ ಖಚಿತವಾಗಿ ಕ್ರಮ ಕೈಗೊಳ್ಳುವಂತಿರಬೇಕು. ಇಂಥ ವಾತಾವರಣ ಎಲ್ಲ ಠಾಣೆಗಳಲ್ಲೂ ಉಂಟಾಗಬೇಕು. ಈಗ ಇಂಥ ವಾತಾವರಣ ಎಲ್ಲೂ ಇಲ್ಲವಾಗಿದೆ.

(2ನೇ ಪುಟಕ್ಕೆ)

ಓದುಗರ ಪತ್ರಗಳು

ಸಾಲ ನೀಡಲು ಮನವಿ

ಮಾನ್ಯರೆ,

ಈ ಹಿಂದೆ ನಮ್ಮ ನರಸಿಂಹರಾಜಪುರಕ್ಕೆ ಸಾಲ ವಿತರಣೆ ಮಾಡುವ ಸಲುವಾಗಿ ಕೇಂದ್ರ ಹಣಕಾಸಿನ ಉಪ ಸಚಿವ ಜನಾರ್ದನ ಪೂಜಾರಿಯವರು ಆಗಮಿಸಿ ಸಾಲ ವಿತರಣೆ ಮಾಡಿದರಷ್ಟೆ. ನಮ್ಮಗಳಿಗೂ ಸಾಲ ಮಂಜೂರಾತಿ ಕೋರಿ ಈ ಕೆಳಗೆ ಸಹಿ ಹಾಕಿರುವ ನಾವುಗಳು ಮನವಿಯನ್ನು ಅರ್ಪಿಸಿದ್ದೇವೆ. ಆದರೆ ಈ ನಮ್ಮ ಮನವಿಯ ಬಗ್ಗೆ ಈವರೆಗೂ ಯಾವ ಬ್ಯಾಂಕಿನಿಂದಲೂ ನಮ್ಮಗಳಿಗೆ ಸೂಚನಾಪತ್ರವಾಗಲಿ ಅಥವಾ ಇನ್ನ್ಯಾವುದೇ ರೀತಿಯ ಪ್ರತಿಕ್ರಿಯೆಯಾಗಲಿ ಬಂದಿಲ್ಲ.

ಈ ಹಿಂದೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ "ಎಂದು ಬರುವಿರಿ ಪೂಜಾರಿ?" ಎಂಬ ವರದಿ ಸನ್ಮಾನ್ಯ ಲೋಕಸಭಾ ಸದಸ್ಯೆ ಕುಮಾರಿ ತಾರಾದೇವಿಯವರ ಶೀಘ್ರಗಮನ ಸೆಳೆದಿತ್ತು. ಆದುದರಿಂದ, ಈ ನಮ್ಮ ಮನವಿಯನ್ನೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ, ನಮ್ಮಗಳಿಗೆ ನೆರವಾಗಲು ಕೋರುತ್ತೇವೆ.

—**ನೊಂದವರು,**
ನ.ರಾ. ಪುರ.
(13 ಜನರ ಸಹಿಗಳಿವೆ.)

ಸೈಕಲ್ ಪ್ರವಾಸ ಮುಂದೂಡಿಕೆ

ಮಾನ್ಯರೆ,

ತಮ್ಮ ಪತ್ರಿಕೆಯ 25-5-86ರ ಸಂಚಿಕೆಯಲ್ಲಿ ಪ್ರಕಟವಾಗಿದ್ದಂತೆ ಯುವಕ ಸಂಘದ ಸದಸ್ಯರಾದ ನಾವುಗಳು ಇದೇ ತಾ॥ 30ರಂದು ಸೈಕಲ್ ಮೇಲೆ ಕರ್ನಾಟಕ ರಾಜ್ಯ ಪ್ರವಾಸಕ್ಕಾಗಿ ಹೊರಡಬೇಕಿತ್ತು. ಆದರೆ ನಮಗೆ ಮುಖ್ಯವಾಗಿ ಧನ ಸಹಾಯದ ಭರವಸೆಯನ್ನಿತ್ತ ಅರಣ್ಯ ಸಂರಕ್ಷಣಾಧಿಕಾರಿಯವರು ಪ್ರವಾಸವನ್ನು ಮುಂದೂಡಲು ಸಲಹೆಯನ್ನಿತ್ತರು. ಅಲ್ಲದೆ ಕೊಪ್ಪದ ಲಯನ್ಸ್ ಕ್ಲಬ್‌ನಿಂದ ನಿರೀಕ್ಷಿಸಿದ್ದ ಧನ ಸಹಾಯವೂ ಕಾರಣಾಂತರದಿಂದ ಬರಲಿಲ್ಲವಾಗಿ ನಾವುಗಳು ಹಣದ ಅಡಚಣೆಯಿಂದ ನಮ್ಮ ಸೈಕಲ್ ಪ್ರವಾಸವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಿದ್ದೇವೆ

—**ಪ್ರವೀಣ್ ಹೆಚ್. ನಾಯಕ್,**
ಮಹೇಶ್ ಸಿ.ಟಿ., ಕೊಪ್ಪ.

ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಡ್ರೈವಿಂಗ್ ಲೈಸೆನ್ಸ್‌ಗೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಸ್ವಯಂ ಉದ್ಯೋಗ ಯೋಜನೆಯನ್ವಯ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ಕೋಮು (ಬಿ. ಸಿ. ಎಂ.), ಹಿಂದುಳಿದ ಜಾತಿ (ಬಿ. ಸಿ. ಟಿ.), ಹಾಗೂ ಹಿಂದುಳಿದ ಬುಡಕಟ್ಟು (ಬಿ. ಟಿ.)ಗಳಿಗೆ ಸೇರಿದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಆಟೋರಿಕ್ಷಾ, ಲಘುವಾಹನ ಹಾಗೂ ಭಾರೀ ವಾಹನ ಚಾಲನೆ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಈ ಸಾಲಿನಲ್ಲಿ ಆಟೋರಿಕ್ಷಾ ಚಾಲನಾ ತರಬೇತಿಗೆ 4 ಜನರನ್ನು, ಲಘು ವಾಹನ ಚಾಲನೆಗೆ 4 ಜನರನ್ನು ಹಾಗೂ ಭಾರೀ ವಾಹನ ಚಾಲನೆಗೆ 3 ಜನರನ್ನೂ ಆಯ್ಕೆ ಮಾಡಲಾಗುವುದು.

ಒಂದು ತಿಂಗಳ ತರಬೇತಿಯ ಅವಧಿಯಲ್ಲಿ 200 ರೂ. ತರಬೇತಿ ಶುಲ್ಕವನ್ನೂ, ತರಬೇತಿಯ ನಂತರ ಶಾಶ್ವತ ಡ್ರೈವಿಂಗ್ ಲೈಸೆನ್ಸ್ ಪಡೆಯಲು ತಗಲುವ ಶುಲ್ಕವನ್ನೂ ನೀಡಲಾಗುತ್ತದೆ.

ನಿಗದಿತ ಅರ್ಜಿ ಫಾರಂಗಳನ್ನು, ಹೆಚ್ಚಿನ ವಿವರಗಳನ್ನೂ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಚೇರಿಯಿಂದ ಪಡೆಯ ಬಹುದು. ಅರ್ಜಿ ಸಲ್ಲಿಸಲು ಕಡೇ ದಿನಾಂಕ: 17-6-86 (ಸಂಜೆ 6 ಗಂಟೆ ವರೆಗೆ).

ಶೃಂಗೇರಿ ತಾಲ್ಲೂಕು ಯಡದಾಳಿನಲ್ಲಿ 12 ಜೊತೆ ಸಾಮೂಹಿಕ ವಿವಾಹ

ಶೃಂಗೇರಿ: ಇಲ್ಲಿಗೆ ಸಮೀಪದ ಯಡದಾಳು ಗ್ರಾಮದಲ್ಲಿ ತಾಳಿಭಾಗ್ಯ ಯೋಜನೆಯನ್ವಯ ಶ್ರೀ ತುಂಗಾ ಯುವಕ ಸಂಘದ ಆಶ್ರಯದಲ್ಲಿ 12 ಜೊತೆ ಸಾಮೂಹಿಕ ವಿವಾಹವನ್ನು ವಿಜೃಂಭಣೆಯಿಂದ ನಡೆಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾದ ಕೆ. ಎಂ. ಶ್ರೀನಿವಾಸ್ ವಹಿಸಿದ್ದರು. ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿ ವಿಷ್ಣು ರಾಜ್ ವಧೂವರರಿಗೆ ಮಾಂಗಲ್ಯವನ್ನು ವಿತರಿಸಿದರು. ತುಂಗಾ ಯುವಕ ಸಂಘದ ಅಧ್ಯಕ್ಷ ವೆಂಕಟೇಶ್ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಪಂಚೆ ಮತ್ತು ಬಾಸಿಂಗಗಳನ್ನು ವಿತರಿಸಿದರು. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಸಹ ಮುಖ್ಯ ಅತಿಥಿಯಾಗಿದ್ದರು.

ಕೃಷ್ಣಮೂರ್ತಿ ಸ್ವಾಗತಿಸಿ, ಎಸ್. ವೆಂಕಟೇಶ್ ವಂದನಾರ್ಪಣೆ ಮಾಡಿದರು.

ವಿಶೇಷ ಜಿಲ್ಲಾಧಿಕಾರಿ ಅಧಿಕಾರ ಸ್ವೀಕಾರ

ಐ.ಆರ್. ಪೆರುಮಾಳ್ ಇವರು ಚಿಕ್ಕಮಗಳೂರು ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಈ ಹಿಂದೆ ಈ ಹುದ್ದೆಯಲ್ಲಿದ್ದು ತಮ್ಮ ಜನಪರ ಕೆಲಸಗಳಿಂದ ಬಹುಬೇಗ ಖ್ಯಾತರಾಗಿದ್ದ ಶ್ರೀಮತಿ ರತ್ನಪ್ರಭಾ ಬೆಂಗಳೂರಿಗೆ ಸರ್ಕಾರದ ಸೆಕ್ರೆಟೇರಿಯಟ್‌ಗೆ ವರ್ಗವಾಗಿದ್ದಾರೆ.

ಕೊಪ್ಪ ಠಾಣಾಧಿಕಾರಿಯಾಗಿ ದುರ್ಗಯ್ಯ ಮರು ನೇಮಕ

ಕೊಪ್ಪ: ಇಲ್ಲಿನ ಠಾಣಾಧಿಕಾರಿ ದುರ್ಗಯ್ಯ ಅವರ ಅಮಾನತ್ತನ್ನು ತೆರವು ಮಾಡಿ ಅವರನ್ನು ಪುನಃ ಇಲ್ಲಿಗೇ ನೇಮಿಸಲಾಗಿದ್ದು, ಅವರು ಮೇ 26ರಂದು ಅಧಿಕಾರ ವಹಿಸಿ ಕೊಂಡರು.

ಅವರ ಸ್ಥಾನದಲ್ಲಿ ಸುಮಾರು ಒಂದೂವರೆ ತಿಂಗಳು ಠಾಣಾಧಿಕಾರಿಯಾಗಿದ್ದ ಚಿಕ್ಕಮಗಳೂರು ಗುಪ್ತಚರ ವಿಭಾಗದ ಟಿ. ಆರ್. ಮಂಜುನಾಥಯ್ಯ ಮೇ 23ರಂದು ಅಧಿಕಾರ ವಹಿಸಿಕೊಟ್ಟು ತಮ್ಮ ಮೊದಲಿನ ಹುದ್ದೆಗೆ ತೆರಳಿದರು. ಈ ಅವಧಿಯಲ್ಲಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಕರಿಸಿದ ಎಲ್ಲಾ ನಾಗರಿಕರಿಗೂ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅವರು ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಮೇಗುಂದಹೋಬಳಿಯಲ್ಲಿಕಾಮಗಾರಿಗಳು

ಜಯಪುರ: ಕಳೆದೆರಡು ವರ್ಷಗಳಲ್ಲಿ ಈ ಹೋಬಳಿಯಲ್ಲಿ ಮಂಜೂರಾಗಿ ಕಾರ್ಯಗತವಾಗಿರುವ ಅಥವಾ ವಿವಿಧ ಹಂತಗಳಲ್ಲಿರುವ ಕೆಲವು ಪ್ರಮುಖ ಕಾಮಗಾರಿಗಳ ವಿವರಗಳನ್ನು ಈಚೆಗೆ ಹೋಬಳಿಯಲ್ಲಿ ಪ್ರವಾಸ ಮಾಡಿದ ಸಚಿವ ಗೋವಿಂದ ಗೌಡರು ನೀಡಿದ್ದಾರೆ.

ಜಯಪುರ-ಬಸರೀಕಟ್ಟೆ ರಸ್ತೆಯಲ್ಲಿ ಟಾರು ಹಾಕಲು ಉಳಿದಿರುವ ಭಾಗಕ್ಕೆ ಟಾರು ಹಾಕಲು 2 ಲಕ್ಷ ರೂ.ಗಳ ಕಾಮಗಾರಿಗೆ ಈ ವರ್ಷದ ಬಜೆಟ್‌ನಲ್ಲಿ ಮಂಜೂರಾತಿ ದೊರೆತಿದೆ

ಹಳ್ಳಿ-ಹೆದ್ದಾರಿ ಯೋಜನೆಯನ್ವಯ ಕೌನಹಳ್ಳ ಊರಿಗೆ ರಸ್ತೆಗಾಗಿ 3 ಲಕ್ಷರೂ. ಮಂಜೂರಾಗಿದೆ. ಆದರೆ ರಸ್ತೆಗೆ ಬೇಕಾದ ಭೂಮಿಯನ್ನು ಹಲವು ಪ್ಲಾಂಟರುಗಳು ಒತ್ತುವರಿ ಮಾಡಿಕೊಂಡಿದ್ದು, ಆ ಪೈಕಿ ಕೆಲವರು ಅದನ್ನು ತೆರವು ಮಾಡಲು ಒಪ್ಪದಿರುವುದರಿಂದ ಅನುಮೋದನೆ ತಡೆಹಿಡಿಯಲಾಗಿದೆ.

ಕೊಗ್ರೆಹಳ್ಳಕ್ಕೆ 2 ಲಕ್ಷ 50 ಸಾವಿರ ರೂ. ವೆಚ್ಚದ ಸೇತುವೆ ಕೆಲಸ ನಡೆಯುತ್ತಿದೆ. ಕೋಟೆತೋಟ ಹಳ್ಳದ ಸೇತುವೆಗಾಗಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ 1.5 ಲಕ್ಷ ರೂ. ಮಂಜೂರಾಗಿದೆ.

ಭೈರೇದೇವರು ಗ್ರಾಮಕ್ಕೆ 2.5 ಕಿ.ಮೀ. ಕೂಡು ರಸ್ತೆಗೆ ಗ್ರಾಮೀಣ ಭೂ ರಹಿತರ ಉದ್ಯೋಗ ದೃಢೀಕರಣ ಯೋಜನೆ (ಆರ್ ಎಲ್ಇಜಿಪಿ)ಯಲ್ಲಿ 2 ಲಕ್ಷ ರೂ. ಮಂಜೂರಾಗಿದ್ದು, ಕೆಲಸ ಬಿರುಸಿನಿಂದ ನಡೆಯುತ್ತಿದೆ. ಶಾಂತಿಗ್ರಾಮದಲ್ಲಿ ಕುಂಬಾರಗುಂಡಿ ಹಳ್ಳಕ್ಕೆ 1.5 ಲಕ್ಷ ರೂ. ವೆಚ್ಚದ ಸೇತುವೆಯ ನಿರ್ಮಾಣ ಮುಗಿದಿದೆ.

ಮೆಣಸಿನಹಾಡ್ಯ ಗಿರಿಜನ ಹಳ್ಳಿಗೆ 10 ಲಕ್ಷ 38 ಸಾವಿರ ರೂ. ವೆಚ್ಚದಲ್ಲಿ 5 ಕಿ. ಮೀ. ದೂರದ ರಸ್ತೆ ನಿರ್ಮಾಣವಾಗಿದೆ.

ಉಚಿತ ಪಠ್ಯ ಪುಸ್ತಕ: ಮುಖ್ಯೋಪಾಧ್ಯಾಯರಿಗೆ ಸೂಚನೆ

ಚಿಕ್ಕಮಗಳೂರು: 1986-87ನೇ ಸಾಲಿಗೆ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಉಚಿತವಾಗಿ ಹಂಚಲು ಮತ್ತು 8ರಿಂದ 10ನೇ ತರಗತಿ, ಮೊದಲನೇ ಮತ್ತು ಎರಡನೇ ವರ್ಷದ ಪಿ. ಯು. ಸಿ. ಹಾಗೂ ಮೊದಲನೇ ಮತ್ತು ಎರಡನೇ ವರ್ಷದ ಟಿ. ಸಿ. ಹೆಚ್. ತರಗತಿಗಳಿಗೆ ಸಂಬಂಧಿಸಿದ ಪಠ್ಯ ಪುಸ್ತಕಗಳನ್ನು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರುಗಳು ಅಗತ್ಯವಿರುವಷ್ಟು ಪುಸ್ತಕಗಳನ್ನು ಶಾಲಾ ತಪಸಿಕಾಧಿಕಾರಿಗಳ ಅನುಮೋದನೆಯೊಂದಿಗೆ ಕಾರ್ಯದರ್ಶಿಗಳು, ಟಿ.ಎ.ಪಿ.ಸಿ.ಎಂ.ಎಸ್., ಇವರಿಂದ ಪಡೆದು ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ವಿತರಣೆ ಮಾಡಬೇಕೆಂದು ಚಿಕ್ಕಮಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ರಾಷ್ಟ್ರೀಯ ರಸ್ತೆ ಓಟಕ್ಕೆ ಜೆ. ಎಸ್. ಗೀತಾ ಆಯ್ಕೆ

ಚಿಕ್ಕಮಗಳೂರು: ಇಲ್ಲಿನ ಕ್ರೀಡಾ ಹಾಸ್ಟೆಲನ್ನು ಪ್ರತಿನಿಧಿಸುತ್ತಿರುವ ಕೊಪ್ಪದ ಜೆ. ಎಸ್. ಗೀತಾ ಮೇ 25ರಂದು ಇಲ್ಲಿ ನಡೆದ ರಾಜ್ಯ ಮಟ್ಟದ 10 ಕಿ. ಮೀ. ರಸ್ತೆ ಓಟದ ಸ್ಪರ್ಧೆಯಲ್ಲಿ 2ನೇ ಸ್ಥಾನ ಪಡೆದಿದ್ದು, ಕಲ್ಕತ್ತಾದಲ್ಲಿ ನಡೆಯಲಿರುವ ರಾಷ್ಟ್ರೀಯ ರಸ್ತೆ ಓಟದ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸಲಿದ್ದಾರೆ.

ಕೊಪ್ಪ ನಾಗರಿಕರೊಂದಿಗೆ ಎಸ್ಪಿ ಭೇಟಿ

(1ನೇ ಪುಟದಿಂದ)

ಹಾಗೆಯೇ ಪೋಲೀಸ್ ಅಧಿಕಾರಿಗಳಲ್ಲಿ ಇಲ್ಲಿಂದ ಜಿಲ್ಲೆಯವರೆಗೆ ಎಲ್ಲ ಹಂತಗಳಲ್ಲೂ ಹೊಂದಾಣಿಕೆ ಮತ್ತು ವಿಶ್ವಾಸ ಇರಬೇಕು. ಪೋಲೀಸರು ದೃಢ ಕ್ರಮ ಕೈಗೊಳ್ಳ ಬೇಕಾದಾಗ ಮೇಲಧಿಕಾರಿಗಳ ಪೂರ್ಣ ಬೆಂಬಲದ ಭರವಸೆ ಇರಬೇಕು. ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್‌ಸ್ಪೆಕ್ಟರುಗಳಲ್ಲಿ ಪರಸ್ಪರ ಗುಮಾನಿ, ವಿರಸ ಇರಬಾರದು. ಈ ಸರ್ಕಲ್‌ನಲ್ಲಿ ಈಚೆಗೆ ಇಂಥ ಪರಿಸ್ಥಿತಿ ಇತ್ತು.

ಯಾವುದೇ ಠಾಣೆಯ ಪೋಲೀಸರ ಅಥವಾ ಅಧಿಕಾರಿಗಳ ಬಗ್ಗೆ ಯಾರದಾದರೂ ಆಕ್ಷೇಪಗಳಿದ್ದಲ್ಲಿ ಅವುಗಳ ಬಗ್ಗೆ ಅವರು ಸರಿಯಾದ ಸಮರ್ಥನೆ ಕೊಡ ಬೇಕು. ಹಾಗೂ ಆ ಬಗ್ಗೆ ಮೇಲಧಿಕಾರಿಗಳು ಸೂಕ್ತ ವಿಚಾರಣೆ ನಡೆಸ ಬೇಕು. ನಿರಾಧಾರವಾದ ಆರೋಪಗಳಿಗೆ ಎಡೆ ಕೊಡಬಾರದು. ಇಂಥವನ್ನು ವಿಪುಲವಾಗಿ ಹಬ್ಬಿಸುವುದರಿಂದಲೇ ಪೋಲೀಸ್ ವ್ಯವಸ್ಥೆಯನ್ನು ಬಿಗಿ ತಪ್ಪಿಸುವುದಕ್ಕೂ, ಊರಲ್ಲಿ ಗೊಂದಲ, ಅಪನಂಬಿಕೆ ಹಬ್ಬಿಸುವುದಕ್ಕೂ ಸಮಾಜ ದ್ರೋಹಿ ಶಕ್ತಿಗಳಿಗೆ ಸಾಧ್ಯವಾಗುವುದು—ಎಂಬ ಸಲಹೆಗಳನ್ನೆಲ್ಲ ಎಸ್ಪಿ ಕೇಳಿದರು.

ಆಟೋ ರಿಕ್ಷಾಗಳವರ ಬಗ್ಗೆ ಇಡೀ ಜಿಲ್ಲೆಗೆ ಅನ್ವಯವಾಗುವಂತೆ ಸುತ್ತೋಲೆಯೊಂದನ್ನು ಹೊರಡಿಸಲಿರುವುದಾಗಿ ಅವರು ತಿಳಿಸಿದಾಗ, ಆಟೋದವರಿಗೆ ಡ್ರೈವಿಂಗ್ ಲೈಸೆನ್ಸ್, ಪರ್ಮಿಟ್ ಇತ್ಯಾದಿ ದಾಖಲಾತಿಗಳನ್ನು ಪಡೆದು ಕೊಳ್ಳಲು ವಿಪರೀತವಾದ ಲಂಚ ಮತ್ತು ಮಧ್ಯವರ್ತಿ ಸುಲಿಗೆಯಿಂದ ಕಷ್ಟವಾಗುತ್ತಿದ್ದು, ಈ ಬಗ್ಗೆ ಅವರಿಗೆ ನೆರವಾಗ ಬೇಕೆಂದು ಮನವಿ ಮಾಡಲಾಯಿತು. ಸಭೆಯ ನಂತರ ಪುರಸಭಾಧ್ಯಕ್ಷ ಮಂಜುನಾಥ ಶೆಟ್ಟಿ ಮತ್ತಿತರರು ಎಸ್ಪಿಯವರನ್ನು ಭೇಟಿ ಮಾಡಿದ್ದರೆಂದು ತಿಳಿದುಬಂದಿದೆ.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದಿನಪಟಿಗೆ ಅಚ್ಚುಕೂಟ, ಕೊಪ್ಪ.